# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:02 • ಸಂಚಿಕೆ: 21 • ನೋಂದಣಿ ನಂ.:KARKAN27911 • ವಿಜಯನಗರ • 14.07.2024 • ಭಾನುವಾರ • ಪುಟ:04 • ಬೆಲೆ:2
Volume:02 • Issue: 21 • Reg.No:KARKAN27911 • VIJAYANAGARA • 14.07.2024 • Sunday • Page:04 • Rs:2




ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ–ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

75,000

HAMPI TIMES E-PAPER READERS

94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201


## ನಿತ್ಯ ಪಂಚಾಂಗ

ಮಾಸ: ಆಷಾಢ । ಸಂವತ್ಸರ: ಕ್ರೋಧಿ

**14–07–2024 – ಭಾನುವಾರ**

| | |
|---|---|
| ತಿಥಿ | : ಅಷ್ಟಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಚಿತ್ತ |
| ಯೋಗ | : ಶಿವ |
| ಕರಣ | : ಭವ |
| ಸೂರ್ಯೋದಯ | : 05:51:07 |
| ಸೂರ್ಯಾಸ್ತ | : 19:14:28 |
| ರಾಹು | : 17:34–19:14 |
| ಯಮಘಂಡ | : 12:33–14:13 |
| ಗುಳಿಕ | : 15:54–17:34 |

## ತುಂಗಭದ್ರಾ ನೀರಿನ ಮಟ್ಟ



**ಶನಿವಾರ : 13–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1606.21 ಅಡಿ |
| ಒಳ ಹರಿವು | 18060 ಕ್ಯುಸೆಕ್ |
| ಹೊರ ಹರಿವು | 210 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 30.690 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1585.22 ಅಡಿ |
| ಒಳ ಹರಿವು | 7069 ಕ್ಯುಸೆಕ್ |
| ಹೊರ ಹರಿವು | 261 ಕ್ಯುಸೆಕ್ |
| ಸಾಮರ್ಥ್ಯ | 7.471 ಟಿಎಂಸಿ |

# ಕಲಿಕಾಸಕ್ತಿ ಹೆಚ್ಚಿಸಿದ ಹಂಪಿ ಟೈಮ್ಸ್ ಮಾರ್ಗದರ್ಶಿ

## ಮುಖ್ಯಗುರು ಡಾ.ಅಕ್ಕಮಹಾದೇವಿ ಅಭಿಮತ । ಎಸ್ಸೆಸ್ಸೆಲ್ಸಿ ಪರೀಕ್ಷಾ ವಂಚಿತರಿಗೂ ಸಹಕಾರಿ


ಹೊಸಪೇಟೆ ಅನಂತಶಯನಗುಡಿ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಂದ ಹಂಪಿ ಟೈಮ್ಸ್ ಮಾರ್ಗದರ್ಶಿಗೆ ಮೆಚ್ಚುಗೆ


ಹೊಸಪೇಟೆ ಚಿತ್ತವಾಡ್ಗಿ ಮುನಿಸಿಫಲ್ ಹೈಸ್ಕೂಲ್ ವಿದ್ಯಾರ್ಥಿಗಳು, ಶಿಕ್ಷಕಕರು ಹಂಪಿ ಟೈಮ್ಸ್ ಮಾರ್ಗದರ್ಶಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

■ **ಹಂಪಿ ಟೈಮ್ಸ್ ಹೊಸಪೇಟೆ**

ಈ ಬಾರಿಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆಯಬೇಕೆಂಬ ಮಹತ್ವಾಕಾಂಕ್ಷೆಯಿಂದ ಹಂಪಿ ಟೈಮ್ಸ್ ದಿನಪತ್ರಿಕೆ ದಿನಕ್ಕೊಂದು ವಿಷಯಗಳ ಪ್ರಶ್ನೋತ್ತರ ಸರಣಿ ಪ್ರಕಟಿಸಿ ಹೊಸಪೇಟೆ ತಾಲೂಕಿನ ಆಯ್ದ ಶಾಲೆಗಳ ವಿದ್ಯಾರ್ಥಿಗಳ ಕೈಗೆ ಉಚಿತವಾಗಿ ಪತ್ರಿಕೆ ನೀಡುತ್ತಿರುವುದು ಶ್ಲಾಘನೀಯ ಕಾರ್ಯ. ಮಕ್ಕಳು ಇದರ ಪ್ರಯೋಜನ ಪಡೆದು ಗರಿಷ್ಠ ಅಂಕ ಗಳಿಸಬೇಕು ಎಂದು ಅನಂತಶಯನಗುಡಿ ಸರ್ಕಾರಿ ಪ್ರೌಢಶಾಲೆಯ ಮುಖ್ಯಗುರುಗಳಾದ ಡಾ.ಅಕ್ಕಮಹಾದೇವಿ ಹೇಳಿದರು.

ನಗರದ ಅನಂತಶಯನಗುಡಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶನಿವಾರ ಬೆಳಿಗ್ಗೆ ವಿದ್ಯಾರ್ಥಿಗಳಿಗೆ ಪತ್ರಿಕೆ ವಿತರಿಸಿ ಮಾತನಾಡಿದರು. ಸ್ಥಳೀಯ ಹಂಪಿ ಟೈಮ್ಸ್ ಪತ್ರಿಕೆ ವಿದ್ಯಾರ್ಥಿ ಸ್ನೇಹಿಯಾಗಿ ಹೊರಹೊಮ್ಮಿದೆ. ಮೌಲ್ಯಯುತ ಲೇಖನಗಳು, ವಿಜ್ಞಾನ, ನೈತಿಕ ಶಿಕ್ಷಣದ ಅಗತ್ಯತೆ, ಕವನ, ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ ಸೇರಿದಂತೆ ಜಿಲ್ಲೆಯ ಯುವ ಬರಹಗಾರರಿಗೆ ವೇದಿಕೆಯಾಗಿರುವುದು ಹೆಮ್ಮೆಯ ಸಂಗತಿ. ಈ ಭಾರಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಫಲಿತಾಂಶ ಹೆಚ್ಚಳಕ್ಕಾಗಿ ಹಂಪಿ ಟೈಮ್ಸ್ ಬಳಗ ಶ್ರಮಿಸುತ್ತಿದೆ. ವಿದ್ಯಾರ್ಥಿಗಳು ಪ್ರತಿನಿತ್ಯ ಪತ್ರಿಕೆಯಲ್ಲಿ ಪ್ರಕಟವಾಗುವ ವಿಷಯವಾರು ಮಾರ್ಗದರ್ಶಿಯನ್ನು ಬರೆದಿಟ್ಟುಕೊಂಡು ಅಭ್ಯಾಸ ಮಾಡಿ, ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳಿಸುವ ಮೂಲಕ ಪತ್ರಿಕೆ ಬಳಗದ ಶ್ರಮ ಸಾರ್ಥಕಗೊಳಿಸಬೇಕು. ವಿದ್ಯಾರ್ಥಿಗಳು ತಮಗಿರುವ ಸಂದೇಹಗಳಿಗೆ ಕೂಡಲೇ ಶಿಕ್ಷರನ್ನು ಕೇಳಿ ಪರಿಹರಿಸಿಕೊಂಡಾಗ ಸಮಸ್ಯೆ ಎದುರಾಗದು. ಶಿಕ್ಷಕರ ಮಾರ್ಗದರ್ಶನದಲ್ಲಿ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಓದು, ಬರಹ ಹೆಚ್ಚಿಸಿಕೊಂಡು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಬೇಕು ಎಂದರು.

ಸಂಪಾದಕ ಬಸಾಪುರ ಬಸವರಾಜ ಮಾತನಾಡಿ, ವಿಷಯ ತಜ್ಞ ಶಿಕ್ಷಕರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಈ ಹಿಂದೆ ಅನೇಕ ಬಾರಿ ಕೇಳಿದ ಪ್ರಶ್ನೆಗಳು ಮತ್ತು ಮುಂಬರುವ ಪರೀಕ್ಷೆಯಲ್ಲಿ ಕೇಳಬಹುದಾದ ಸಂಭವನೀಯ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಈಗಿನಿಂದಲೇ ಸಿದ್ಧರಾಗಲು ಪತ್ರಿಕೆಯಲ್ಲಿ ಪ್ರಶ್ನೋತ್ತರ ಸರಣಿ ಆರಂಭಿಸಲಾಗಿದೆ. ಮುದ್ರಣ ಮತ್ತು ಇ–ಪೇಪರ್‌ನಲ್ಲೂ ಲಭ್ಯವಿದೆ. ರಾಜ್ಯದ ಅನೇಕ ಕಡೆಗಳಿಂದ ಶಿಕ್ಷಕರು, ಪಾಲಕರು ಪತ್ರಿಕೆ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇ–ಪೇಪರ್‌ನಲ್ಲಿ ದೊರೆಯುವ ಪ್ರಶ್ನೋತ್ತರ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ಅಭ್ಯಾಸದಲ್ಲಿ ತೊಡಗಿದ್ದಾರೆ. ನಾನಾಕಾರಣಗಳಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ ವಂಚಿತರು ಸಹ ಪ್ರತಿನಿತ್ಯ ಪ್ರಕಟವಾಗುವ ವಿಷಯಗಳನ್ನು ಪ್ರತ್ಯೇಕ ನೋಟ್ಸ್ ಮಾಡಿಕೊಂಡು ಓದಿದರೆ ನೇರವಾಗಿ ಪರೀಕ್ಷೆ ಕಟ್ಟಿ ಬರೆಯಲು ಸಹಕಾರಿಯಾಗಿದೆ. ಪತ್ರಿಕೆಯು ಈ ಕಾರ್ಯಕ್ಕೆ ಶಿಕ್ಷಕರ ಬಳಗ ಕೈಜೋಡಿಸಿದೆ ಎಂದರು.

ಶಾಲೆಯವಿದ್ಯಾರ್ಥಿಗಳಾದಗಿರೀಶ್‌ತಬಲವಾದ್ಯದೊಂದಿಗೆ ಶ್ರುತಿ ಹಾರ್ಮೋನಿಯಂ ನುಡಿಸುತ್ತಾ ವಚನಗಾಯನ ಪ್ರಸ್ತುತಪಡಿಸಿದರು. ಇದೇ ಸಂದರ್ಭದಲ್ಲಿ ಶಾಲೆಯ ಶಿಕ್ಷಕರು, ಸಂಗೀತ ಶಿಕ್ಷಕರು ಇದ್ದರು.


ಹೊಸಪೇಟೆ ಅನಂತಶಯನಗುಡಿ ಪ್ರೌಢಶಾಲೆಯ ವಿದ್ಯಾರ್ಥಿನಿ ಶ್ರುತಿ ಹಾರ್ಮೋನಿಯಂ ನುಡಿಸುತ್ತಾ ವಚನಗಾಯನ ಪ್ರಸ್ತುತಪಡಿಸಿದರು.


## ಡಾ|| ಕೆ ವಿ ಶೇಖರ್ ಆಸ್ಪತ್ರೆ

ಮಕ್ಕಳು ಮತ್ತು ಮೂಳೆ ವಿಶೇಷ ಆಸ್ಪತ್ರೆ

ಪ್ರಗತಿ ಗ್ರಾಮೀಣ ಬ್ಯಾಂಕ್ ಎದುರುಗಡೆ, ಪಟೇಲ್ ನಗರ, ಹೊಸಪೇಟೆ.

**ಸೌಲಭ್ಯಗಳು ಲಭ್ಯವಿದೆ**
- ಆರ್ಥೋಪೆಡಿಕ್ ಸಮಾಲೋಚನೆ
- ಎಕ್ಸ್–ಕಿರಣಗಳು
- ಔಷಧಾಲಯ

ವಿದೇಶದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದೆ

**ಕಾರ್ಯವಿಧಾನಗಳು**
- ಪ್ಲಾಸ್ಟರ್ ಆಫ್ ಪ್ಯಾರಿಸ್ (ಮೂಳೆ ಸಮಸ್ಯೆಗಳಿಗೆ)
- ಚುಚ್ಚುಮದ್ದುಗಳು
- ಪೀಡಿಯಾಟ್ರಿಕ್ ಆರ್ಥೋಪೆಡಿಕ್




Dr. Kiran Kakandki
Orthopedic Surgeon

14 ದಿನಗಳು ಮಾತ್ರ

ಸಾಮಾನ್ಯ ವಯಸ್ಕ ಮೂಳೆಚಿಕಿತ್ಸೆ
ಸಂಪರ್ಕ ಸಂಖ್ಯೆ 6360151489
What'sapp ಸಹ ಲಭ್ಯವಿದೆ

ಹೊಸಪೇಟೆಯಲ್ಲಿ
ವಿಶೇಷ ಭೇಟಿ ಸಮಾಲೋಚನೆ

ಸಮಗ್ರ ಮೂಳೆಚಿಕಿತ್ಸೆಯ ಆರೈಕೆಗಾಗಿ ಭೇಟಿ ನೀಡಿ
(ಮೂಳೆ ಸಮಸ್ಯೆಗಳು, ಸ್ನಾಯು ಸಮಸ್ಯೆಗಳು ಮತ್ತು ಬೆನ್ನುಮೂಳೆಯ ನರ ಸಮಸ್ಯೆಗಳು).



ಸಂದರ್ಶನ ದಿನಾಂಕ
9–7–24 ರಿಂದ 22–7–24ರವರೆಗೆ

ಸಮಯ
ಬೆ. 9.00 ರಿಂದ ರಾ. 9.00ರವರೆಗೆ

ನೇಮಕಾತಿಗಳು ಮತ್ತು ವಿಚಾರಣೆಗಳಿಗಾಗಿ
6360151489


## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

SCAN & READ E-PAPER

SSLC Social Science Hampi Times Margadarshi 2024-25

ಇತಿಹಾಸ ಅಧ್ಯಾಯ 1

### ಭಾರತಕ್ಕೆ ಯುರೋಪಿಯನ್ನರ ಆಗಮನ

**1. ಯುರೋಪಿನ ವ್ಯಾಪರದ ಹೆಬ್ಬಾಗಿಲು**
– ಕಾನ್ ಸ್ಟಾಂಟಿನೋಪಲ್

**2. ನೀಲಿ ನೀರಿನ ನೀತಿ ಜಾರಿಗೆ ತಂದವರು**
– ಫ್ರಾನ್ಸಿಸ್ಕೊ ಡಿ ಆಲ್ಮೇಡ್

**3. ಭಾರತ ಮತ್ತು ಯರೋಪಿನ ಹೊಸ ಜಲಮಾರ್ಗ ಕಂಡು ಹಿಡಿದವರು**
– ವಾಸ್ಕೋಡಿಗಾಮ (ಜೂನ್ 2020)

**4. ಅಟೋಮಾನ್ ಟರ್ಕರು 1453ರಲ್ಲಿ ವಸಪಡಿಸಿಕೊಂಡ ನಗರ**
– ಕಾನ್ ಸ್ಟಾಂಟಿನೋಪಲ್ (ಜೂನ್ 2020)

**5. ಡಚ್ಚರ ವಿರುದ್ದ ಹೋರಾಡಿದ ವೈನಾಡಿನ ರಾಜ**
– ಮಾರ್ತಂಡವರ್ಮ

**6. ದ್ವಿಪ್ರಭುತ್ವ ಪದ್ಧತಿಯನ್ನು ವಿವರಿಸಿ 2 ಅಂಕ (ಜೂನ್ 2020)**
* ರಾಬರ್ಟ್ ಕ್ಲೈವ್ 1765 ರಲ್ಲಿ ಬಂಗಾಳದಲ್ಲಿ ದ್ವಿಪ್ರಭುತ್ವ ಪದ್ಧತಿಯನ್ನು ಜಾರಿಗೆ ತಂದನು.
* ಈ ಪದ್ಧತಿಯಂತೆ ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು.
* ನವಾಬನು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು.

**7. ಭಾರತಕ್ಕೆ ಹೊಸ ಜಲಮಾಗರ್ಘ ಕಂಡುಹಿಡಿಯಲು ಯುರೋಪಿಯನ್ನರಿಗೆ ಪ್ರೇರಿತವಾದ ಅಂಶಗಳಾವುವು.**
**3 ಅಂಕ (Sept 2020)**
* 1453 ರಲ್ಲಿ ಟರ್ಕರು ಕಾನ್ ಸ್ಟಾಂಟಿನೋಪಲ್ ಪ್ರದೇಶವನ್ನು ವಶಪಡಿಸಿ ಕೊಂಡರು.
* ಆ ನಗರವನ್ನು ಸಂಧಿಸುವ ಎಲ್ಲಾ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಹೋದವು..
* ಟರ್ಕರು ಈ ಮಾರ್ಗದ ವ್ಯಾಪಾರದ ಮೇಲೆ ಹೆಚ್ಚಿನ ತೆರಿಗೆಗಳನ್ನು ವಿದಿಶಿಸಿದರು
* ಪರಿಣಾಮವಾಗಿ ವರ್ತಕರಿಗೆ ಈ ಮಾರ್ಗದ ವ್ಯಾಪಾರವು ಲಾಭದಾಯಕವಾಗಿ ಪರಿಣಮಿಸಲಿಲ್ಲ.
* ಇಟಲಿಯ ವರ್ತಕರ ಏಕಸೌಮ್ಯ ಮುರಿಯಲು ಸ್ಪೇನ್, ಪೋರ್ಚುಗಲ್ ದೇಶಗಳು ಪ್ರಯತ್ನಿಸಿದವು.
* ವೈಜ್ಞಾನಿಕ ಅವಿಸ್ಕಾರಗಳಾದ ದಿಕ್ಸೂಚಿ, ಅಷ್ಟಲೋಬ್, ಸಿಡಿಮದ್ದುಗಳು ಸಮುದ್ರಯಾನಕ್ಕೆ ಸಹಕಾರಿಯಾದವು.

**7. ಪ್ಲಾಸಿ ಕದನಕ್ಕೆ ಕಾರಣ ಮತ್ತು ಪರಿಣಾಮಗಳೇನು ?**
**3 ಅಂಕ ಜೂನ್ 2024**
* ದಸ್ತಕಗಳ ದುರಪಯೋಗ ಮಾಡಿಕೊಂಡಿದ್ದು
* ಕಪ್ಪು ಕೋಣೆಯ ದುರಂತ
* ನವಾಬನ ಅನುಮತಿಯಿಲ್ಲದೆ ಕೋಟೆಯನ್ನು ದುರಸ್ತಿ ಮಾಡಿಸಿದ್ದು

**ಪ್ಲಾಸಿಕದನದ ಪರಿಣಾಮಗಳು**
* ಸಿರಾಜ್ ಉದ್ ದೌಲನು ಯುದ್ಧದಲ್ಲಿ ಸೋತನು.
* ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಲೋಭಿತನವನ್ನು ಪ್ರದರ್ಶಿಸಿತು.
* ಮೀರ್ ಜಾಫರ್ ಬಂಗಾಳದ ನವಾಬನಾದನು.
* ಕಂಪನಿ ಬಂಗಾಳದಲ್ಲಿ ವ್ಯಾಪಾರದ ಅನಿಬರ್ಂಧಿತ ಹಕ್ಕನ್ನು ಪಡೆಯಿತು.
* ಮೀರ್ ಜಾಫರ್ 17 ಕೋಟಿ 70 ಲಕ್ಷ ರೂಪಾಯಿಗಳನ್ನು ಕಂಪನಿಗೆ ನೀಡಿದನು.

**8 ಬಕ್ಸಾರ್ ಕದನದ ಪರಿಣಾಮಗಳೇನು ?**
**3 ಅಂಕ (April 2019, 2024)**
* ಯುದ್ಧದಲ್ಲಿ ಮೈತ್ರಿ ಸೈನ್ಯವು ಬ್ರಿಟಿಷರ ವಿರುದ್ಧ ಸೋತಿತು
* 2ನೇ ಷಾ ಆಲಂ ಕಂಪನಿಗೆ ಬಂಗಾಳದ ಮೇಲಿನ ದಿವಾನಿ ಹಕ್ಕನ್ನು ನೀಡಿದನು.
* ಷಾ ಆಲಂ ವಾರ್ಷಿಕ 26ಲಕ್ಷ ರೂಪಾಯಿಗಳಿಗೆ ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟು ಕೊಟ್ಟನು
* ಷುಜ–ಉದ್–ದೌಲನು ಯುದ್ಧನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕಂಪನಿಗೆ ನೀಡಿದನು
* ಬ್ರಿಟಿಷರು ಮೀರ್ ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿದರು
* ಬಂಗಾಳದ ಆಡಳಿತವನ್ನು ಕಂಪನಿ ವಹಿಸಿಕೊಂಡಿತು.

Hampi Times Margadarshi

**ಹಂಪಿ ಟೈಮ್ಸ್ ಮಾರ್ಗದರ್ಶಿ**
**ಇ-ಪೇಪರ್‌ನಲ್ಲೂ ಲಭ್ಯ**
**ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..**
www.hampitimes.com
epaper.hampitimes.com

ಮಾರ್ಗದರ್ಶಿ ಶಿಕ್ಷಕರು : **ಕೊಟ್ರೇಶ್ ಮಾಳಿಗಿ.** ಸಮಾಜ ವಿಜ್ಞಾನ ಶಿಕ್ಷಕರು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )


ಸಾಯಿಮಣಿ ಪ್ರಕಾಶನ, ಹೊಸಪೇಟೆ

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಮರೆಯಾಗಿದೆ ನೈತಿಕ ಶಿಕ್ಷಣ ಬದುಕಲು ಬೇಕಿದೆ ಸದ್ಗುಣ

ಈಗಿನ ಶಿಕ್ಷಣ ವ್ಯವಸ್ಥೆ ಗಮನಿಸಿದರೆ ಭವಿಷ್ಯದಲ್ಲಿ ಮಕ್ಕಳು ದುಡಿಯುವ ಯಂತ್ರಗಳಾಗುವಂತೆ ಇದೆಯೇ ಹೊರತು, ಸದ್ಗುಣಗಳಿರುವ ಮಾನವಾಗಿ ಜೀವನ ನಡೆಸುವ ಯಾವ ನೈತಿಕ ಕಾಳಜಿಯೂ ಕಾಣುತ್ತಿಲ್ಲ. ಅಷ್ಟೇ ಏಕೆ, ಈಗಿನ ವಿದ್ಯಾರ್ಥಿಗಳೂ ಯಂತ್ರಗಳಂತೆ ಓದುವುದು ಮತ್ತು ಹೆಚ್ಚೆಚ್ಚು ಅಂಕಪಡೆಯುವುದರ ಕಡೆಗೇ ಎಲ್ಲ ಗಮನ ಹರಿಸಿದ್ದಾರೆ. ಆಟಗಳು ಇವೆಯಾದರೂ ಇದರ ಆಯ್ಕೆಯನ್ನು ಕೆಲವೇ ಕೆಲವರು ಮಾಡುತ್ತಿದ್ದಾರೆ. ಅದೂ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮುಗಿದ ನಂತರವಷ್ಟೇ. ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಈಗಿನ ಶಿಕ್ಷಣದಿಂದ ಭವಿಷ್ಯದಲ್ಲಿ ಸಮಾಜಕ್ಕೆ ಎಷ್ಟು ಉಪಯುಕ್ತ ಆಗಬಲ್ಲದು ? ಈ ಪ್ರಶ್ನೆಗೆ ಉತ್ತರ ಬಹುತೇಕ ಇಲ್ಲ. ಆದರೆ, ಹಣ ಸಂಪಾದಿಸಲು, ನೌಕರಿ ಗಿಟ್ಟಿಸಿಕೊಳ್ಳಲು ಮಾತ್ರವೇ ಈಗಿನ ಶಿಕ್ಷಣ ಉಪಯುಕ್ತವಷ್ಟೇ. ಇದರಿಂದ ಮೂಡುವ ಪ್ರಶ್ನೆಯೇನೆಂದರೆ ಸಮಾಜಕ್ಕೆ ಇಷ್ಟೇ ಸಾಕಾ? ಇಷ್ಟೇನಾ ಶಿಕ್ಷಣವೆಂದರೆ? ಅಸಲಿಗೆ ಸಮಾಜವೆಂದರೆ ಏನೆಂದು ನಾವು ಅರ್ಥಮಾಡಿಕೊಂಡರೆ ಉತ್ತರ ಸಿಗಬಹುದೇನೋ? ಗುರುಕುಲ ಪದ್ಧತಿ ಇರುವ ಸಂದರ್ಭ ಸಮಾಜ ಹೇಗಿತ್ತು. ಗುರುಕುಲದಿಂದ ಕಲಿತು, ಅಲ್ಲಿಂದ ಹೊರ ಬಂದ ವಿದ್ಯಾರ್ಥಿಗಳು



ಸಮಾಜದಲ್ಲಿ ಹೇಗೆ ಬದುಕಿದರು ಮತ್ತು ಸಮಾಜವನ್ನು ಹೇಗೆ ತಿದ್ದಿದರು ಎಂಬುದು ತಿಳಿಯುತ್ತದೆ. ಗುರುಕುಲದಿಂದ ಬಂದ ದಾಸರು, ತೀರ್ಥರು, ಶರಣರು, ದಿಗ್ಗಜರು ಸಮಾಜದಲ್ಲಿ ಏನೆಲ್ಲ ಬದಲಾವಣೆ ತಂದರು. ಏನೆಲ್ಲ ಪರಿವರ್ತನೆ ಮಾಡಿದರು. ಇಂದಿಗೂ ಅವರನ್ನು ನಾವು ಜಯಂತಿಗಳ ಆಚರಣೆ ಮೂಲಕ ನೆನೆಯುತ್ತೇವೆ. ಆದರೆ, ಅವರ ಆದರ್ಶಗಳನ್ನು ಎಷ್ಟರ ಮಟ್ಟಿಗೆ ಪಾಲಿಸುತ್ತೇವೆಂಬುದು ಅವರವರ ನೈತಿಕತೆಗೆ ಬಿಟ್ಟದ್ದು. ನಮ್ಮ ಮಕ್ಕಳು ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿ ಓದಿದರೆ ಅವರಂತಾಗಲು ಸಾಧ್ಯವೇ? ಅವರಷ್ಟು ಮೇಲುಸ್ತರದಲ್ಲಿ ಬದುಕಲು ಸಾಧ್ಯವೇ ? ಉತ್ತರ ಖಂಡಿತಾ ಇಲ್ಲ. ನಮ್ಮ ಮಕ್ಕಳು ಮಹನೀಯರಂತೆ ಬದಲಾಗದಿದ್ದರೂ ಪರವಾಗಿಲ್ಲ, ಕನಿಷ್ಠ ನೈತಿಕ ಗುಣಗಳನ್ನು ಸಹ ಕಲಿಯದಿದ್ದರೆ ಹೇಗೆ ? ಈಗಿನ ಶಿಕ್ಷಣದಲ್ಲಿ ನೈತಿಕ ಗುಣಗಳು ಇವೆಯಾ ಎಂಬ ಪ್ರಶ್ನೆಗೆ ಉತ್ತರವಿದೆಯಾದರೂ ಅವೆಲ್ಲ ಪಠ್ಯಗಳಲ್ಲಷ್ಟೇ ಲಭ್ಯ. ಪಠ್ಯಗಳಲ್ಲಿ ಜೀವನ ಪಾಠ ಇದೆಯಾದರೂ ವಾಸ್ತವದಲ್ಲಿ ಅದರ ಅನುಸರಣೆ ಇಲ್ಲವೇ ಇಲ್ಲ. ಕನಿಷ್ಠ ಪಕ್ಷ ಮಕ್ಕಳಿಗೆ ಜೀವನ ಪಾಠದ ಪ್ರಾಥಮಿಕ ತಿಳಿವಳಿಕೆ ಪ್ರಾಥಮಿಕ ಹಂತದಿಂದಲೇ ನೀಡಬೇಕಿದೆ. ಗುರುಹಿರಿಯರಿಗೆ ಗೌರವ ನೀಡುವುದು, ತಂದೆ–ತಾಯಿ ಎದುರು ತಗ್ಗಿಬಗ್ಗಿ ನಡೆಯುವುದು, ಸಹೋದರ ಮತ್ತು ಸಹೋದರಿಯರನ್ನು ಮಮತೆಯಿಂದ ಕಾಣುವುದು, ನೆರೆಹೊರೆಯವರ ಜತೆ ವಿಶ್ವಾಸದಿಂದ ಇರುವುದು, ಗೆಳೆಯರೊಂದಿಗೆ ಸ್ನೇಹ ಹಂಚಿಕೊಳ್ಳುವುದು, ಬಂಧು–ಬಳಗದವರ ಜತೆ ಗಟ್ಟಿ ಸಂಬಂಧ ಹೊಂದುವುದು, ಶಾಲೆ–ಮನೆ ಸುತ್ತಮುತ್ತ ಸ್ವಚ್ಛತೆ ಕಾಪಾಡುವುದು, ಉತ್ತಮ ಮಾತುಗಳನ್ನಾಡುವುದು, ಉತ್ತಮ ನಡೆ ಅನುಸರಿಸುವುದು, ದ್ವೇಷ–ಅಸೂಯೆ ಬಿಟ್ಟು, ಪ್ರೀತಿ–ವಾತ್ಸಲ್ಯ–ಮಮತೆ, ಕರುಣೆ ಬೆಳೆಸಿಕೊಳ್ಳುವುದನ್ನು ಮಕ್ಕಳಿಗೆ ಪಠ್ಯದ ಹೊರತಾಗಿಯೂ ತರಗತಿಗಳಲ್ಲಿ ಹೇಳಿಕೊಡುವ ಕೆಲಸವಾಗಬೇಕಿದೆ. ಕನಿಷ್ಠ ಪಕ್ಷ ಮನೆಯಲ್ಲಿ ಪಾಲಕರು ತಮ್ಮ ಮಕ್ಕಳಿಗೆ ನೈತಿಕ ಪಾಠ ಹೇಳಿಕೊಡಬೇಕು. ಇಷ್ಟು ಅಂಶಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಂಡರೆ ಅವರ ಜೀವನ ಸರಿದಾರಿಯಲ್ಲಿ ಸಾಗುತ್ತದೆ. ಆಗ ತಂತಾನೇ ಸಮಾಜವೂ ವಿಕಸನವಾಗುತ್ತದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಕೃಷ್ಣದೇವರಾಯನ ಈ ಹಸಿರು ಶಾಸನದಿಂದ ನಾವೆಲ್ಲ ನಮ್ಮ ಆಲೋಚನೆಗಳನ್ನು ಬದಲಿಸಿಕೊಂಡು ಇಂದಿನ ಮಕ್ಕಳಿಗೆ ಈ ರೀತಿಯ ಶಾಸನಗಳ ಪಾಠಗಳನ್ನು ಅವರ ಶಾಲಾಪಠ್ಯಗಳಲ್ಲಿ ಸೇರಿಸಿ ಅವರಿಗೆ ಬೋಧಿಸಿ ಪರಿಸರ ಪ್ರಜ್ಞೆಯನ್ನು ಬೆಳೆಸುವುದು ಇಂದು ಅತ್ಯಂತ ಅವಶ್ಯವಾಗಿದೆ. ಇದಕ್ಕೆ ಶಿಕ್ಷಣ ತಜ್ಞರು, ಸರ್ಕಾರ ಈ ಶಾಸನವನ್ನು ಶೈಕ್ಷಣಿಕ ಪಠ್ಯಪುಸ್ತಕಗಳಲ್ಲಿ ಸೇರಿಸಿ ಮಕ್ಕಳಿಗೆ ಬೋಧಿಸುವಂತೆ ಮಾಡಿದಲ್ಲಿ ಪರಿಸರ ಸಂರಕ್ಷಣೆ, ವನ್ಯಜೀವಿಗಳ ರಕ್ಷಣೆಗೂ ಅದ್ಯತೆ ದೊರೆತಂತಾಗಲಿದೆ.

# ಶ್ರೀ ಕೃಷ್ಣದೇವರಾಯನ ಪರಿಸರ ಕಾಳಜಿಯ ಹಂಪಿ ಹಸಿರು ಶಾಸನ

ನಾಡಿನ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಶಾಸನಗಳು ಅತ್ಯಂತ ಮಹತ್ವದ ದಾಖಲೆಗಳಾಗಿವೆ. ಶಾಸನಗಳನ್ನು ಬರೆಸುವ ಕ್ರಮ ಪ್ರಾರಂಭವಾಗಿದ್ದು ಅಶೋಕನ ಕಾಲದಿಂದ ಎನ್ನಲಾಗಿದೆ. ಅಂದಿನಿಂದ ವಿಜಯನಗರ ಸಾಮ್ರಾಜ್ಯದವರೆಗೆ ಸಾವಿರ ಸಾವಿರ ಶಾಸನಗಳು ಈ ನಾಡಿನಲ್ಲಿ ಪ್ರಕಟಿಸಲ್ಪಟ್ಟಿವೆ. ಈ ಶಾಸನಗಳಲ್ಲಿ ಹಂಪಿಯ ಮತ್ತು ವಿಜಯನಗರ ಸಾಮ್ರಾಜ್ಯದ ಶಾಸನಗಳು ವಿಶೇಷವಾಗಿ ಗುರುತಿಸಲ್ಪಟ್ಟಿವೆ. ಈ ಹಿಂದಿನ ಸಂಚಿಕೆಯಲ್ಲಿ ವಿಜಯನಗರದ ಲಕ್ಷ್ಮೀಧರಾಮತ್ಯನ ಶಾಸನದ ಬಗ್ಗೆ ಬರೆಯಲಾಗಿತ್ತು. ಈ ಶಾಸನದಲ್ಲಿ ದಾನ ಧರ್ಮ ತೆರಿಗೆ ವಿಚಾರಕ್ಕಿಂತ ಸಮಾಜ ಉದ್ಧಾರಕ್ಕಾಗಿ ಕೆರೆ ಬಾವಿಗಳನ್ನು ಕಾಲುವೆಗಳನ್ನು ನಿರ್ಮಿಸುವುದರ ಬಗ್ಗೆ, ಸಂಕಷ್ಟದಲ್ಲಿ ಸಿಲುಕಿದ ವರನ್ನು ರಕ್ಷಿಸುವ ಬಗ್ಗೆ ಬರೆಯಲಾಗಿದೆ. ಇದೆ ರೀತಿ ಇರುವ ಮತ್ತೊಂದು ಅಪರೂಪದ ಶಾಸನವೆಂದರೆ ಅದು ಕೃಷ್ಣದೇವರಾಯನ ಕಾಲದ ಪರಿಸರಕಾಳಜಿಯ ಶಾಸನ. ಈ ಶಾಸನವನ್ನು ಹಸಿರು ಶಾಸನವೆಂದೆ ಕರೆಯಲಾಗುತ್ತಿದೆ.

ಪರಿಸರ ಕಾಳಜಿಯ ಜೊತೆಗೆ ಪರಿಸರದ ಪ್ರಾಣಿ ಪಕ್ಷಿ ವನ್ಯಜೀವಿಗಳ ಬಗ್ಗೆ ಕಾಳಜಿ ವಹಿಸಿದ ಬಗ್ಗೆ ಮಾಹಿತಿಗಳು ಲಭ್ಯವಾಗುತ್ತದವೆ ಇದು ಸಹ ಆ ಗಮನ ಸೆಳೆಯುತ್ತದೆ ಅಂದರೆ ಭೂಮಿಯನ್ನು ದಾನವಾಗಿ ಬಿಟ್ಟು ಆ ಸ್ಥಳದಲ್ಲಿ ಹಣ್ಣು ಹಂಪಲ ಬಾಳೆ ಮೊದಲಾದ ಗಿಡಗಳನ್ನು ಬೆಳೆದು ಅದರಲ್ಲಿ ಬಂದ ಬೆಳೆಯನ್ನು ಈ ಭಾಗದಲ್ಲಿದ್ದ ಕೋತಿಗಳಿಗೆ ಪಕ್ಷಿಗಳಿಗೆ ಪ್ರಾಣಿಗಳಿಗೆ ತಿನ್ನಲು ಅನುಕೂಲ ಮಾಡಿಕೊಟ್ಟಿರುವುದು ಅತ್ಯಂತ ಆದರ್ಶವಾದ ಕಾರ್ಯವಾಗಿದೆ. ಅಂದರೆ ಮನುಷ್ಯರಿಗೆ ದಾನ ದತ್ತಿಗಳನ್ನು ನೀಡುವುದರ ಜೊತೆಗೆ ಪರಿಸರ ಹಾಗೂ ಪರಿಸರ ದಲ್ಲಿದ್ದ ಪ್ರಾಣಿ ಪಕ್ಷಿಗಳಿಗೂ ಬದುಕುವ ಮತ್ತು ತಿನ್ನುವ ಹಕ್ಕು ಇದೆ ಎನ್ನುವುದನ್ನು ವಿಜಯನಗರದ ಅರಸರುಗಳು ತಮ್ಮ ಆಡಳಿತಾ ವಧಿಯಲ್ಲಿ ತೋರಿಸಿ ನಮಗೆಲ್ಲ ಮಾದರಿಯಾಗಿದ್ದಾರೆ ಇವರ ಈ ಪರಿಸರ ಕಾಳಜಿಯು ನಮಗೆಲ್ಲ ಸ್ಪೂರ್ತಿಯಾಗಬೇಕಾಗಿದೆ. ಈ ಕುರಿತು ಒಂದಷ್ಟು ಮಾಹಿತಿ.

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪಿಯಲ್ಲಿ ಇದುವರೆಗೆ ಸುಮಾರು ಐದು ನೂರಕ್ಕೂ ಹೆಚ್ಚು ಶಾಸನಗಳನ್ನು ಗುರುತಿಸಲಾಗಿದೆ. ಹಾಗೇನೆ ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ ರಾಜ್ಯದ ಹೊರ ರಾಜ್ಯದ ತುಂಬೆಲ್ಲ ಹರಡಿರುವ ಶಾಸನಗಳ ಸಂಖ್ಯೆ ಸುಮಾರು ಐದು ಸಾವಿರಕ್ಕೂ ಹೆಚ್ಚು ಎಂದು ಅಂದಾಜಿಸಲಾಗಿದೆ, ಅಂದರೆ ಒಂದು ಸಾಮ್ರಾಜ್ಯಕ್ಕೆ ಸಂಬಂಧಿಸಿದ ಇಷ್ಟೊಂದು ಸಂಖ್ಯೆಯ ಶಾಸನಗಳು ಮತ್ಯಾವ ಸಾಮ್ರಾಜ್ಯಕ್ಕೆ ಲಭ್ಯವಾಗಿಲ್ಲ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಹಂಪಿ ಮತ್ತು ವಿಜಯನಗರದ ಶಾಸನಗಳು ಮಹತ್ವವನ್ನು ಪಡೆದುಕೊಂಡಿವೆ. ನಾಡಿನ ಬಹುತೇಕ ಶಾಸನಗಳು ದಾನ ದತ್ತಿ ತೆರಿಗೆಗೆ ಸಂಬಂಧಿಸಿದ ಶಾಸನಗಳೆ ಆಗಿರುತ್ತವೆ, ಆದರೆ ಹಂಪಿಯಲ್ಲಿ ಲಭ್ಯವಾಗಿರುವ ಕೆಲವು ಶಾಸನಗಳು ವಿಭಿನ್ನವಾಗಿವೆ. ಸಾಮಾಜಿಕ ಕಾಳಜಿ, ಕಲೆ, ಚಿತ್ರಕಲೆ, ಸಂಗೀತ ಸಂಸ್ಕೃತಿ, ಹಾಗೂ ವಿಶೇಷವಾಗಿ ಪರಿಸರ ಕಾಳಜಿಯ ಶಾಸನವು



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Hampi Times E-paper
SCAN AND READ



ಹಂಪಿ ಒಳನೋಟ

ಸೇರಿರುವುದು ವಿಶೇಷವಾಗಿದೆ. ಕೃಷ್ಣದೇವರಾಯನ ಕಾಲದ ಒಂದು ಶಾಸನವನ್ನು ಪರಿಸರ ಶಾಸನ ಅಥವಾ ಹಸಿರು ಶಾಸನ ಎಂದು ಕರಯಲಾಗುತ್ತಿದೆ. ಆ ಶಾಸನದ ಪಠ್ಯ ಹೀಗಿದೆ.

ಕೃಷ್ಣರಾಯನ ಪಟದಲ್ಲೂ ತಿಂಮಪ್ಪಯ್ಯನ ಪದಾನಿಕೆಯಲಿ ನಾಗ ಭೂವನ ಮಗ ಹೊಂನೆಬೋವನು ಮರಳ ಕೋಡಿ ಮಯಿಲಾರ ದೇವರಿಗೆ ವೆಚ. ಹಿರಿಯರ ಪ್ರಕಾರ ಕೋಟೆಯಿಂದ ಸಸಿ ಅದೇ ವಮು.ಪ್ರ.ಗ ಆರುನೂರು ಹೊಂನು ಸಸಿಯ ಬೆಳೆಸಿದವರಿಗೆ ಕಾಲುವೆಂ ಸೇವಿಸಿ ಹೊಂನಯಗೆ ಸಾಲು 1 ಪಾಲು ಅದೇ ಸಸಿಯ ಬೆಳೆಸುವಗೆ ಎರಡು ನೂರು ಸೋಪಣ್ಣನ ಉದಯ ಬದೂಪಲಾಡ ಚೆಂನಬಸಮು.

ಈ ಶಾಸನ ತಳವಾರಘಟ್ಟದ ತುಂಗಭದ್ರ ನದಿಗೆ ಹತ್ತಿರದಲ್ಲಿದೆ. ಈ ಶಾಸನ ಆರು ಸಾಲುಗಳನ್ನು ಮಾತ್ರ ಹೊಂದಿರುವ ಒಂದು ಚಿಕ್ಕ ಶಾಸನ ಇದರ ಮೇಲ್ಗಡೆ ನಂದಿ, ಕೆಳಗಡೆ ಹಸು ಶಿವಲಿಂಗಕ್ಕೆ ಹಾಲನ್ನು ಕರೆಯುತ್ತಿದೆ ಅದರ ಕೆಳಗಡೆ ಕೃಷ್ಣದೇವರಾಯರ ಚಿತ್ರವಿದೆ. ಈ ಚಿಕ್ಕ ಶಾಸನದಲ್ಲಿ ಬಹುದೊಡ್ಡ ಸಂದೇಶವು ಅಡಗಿದೆ, ಕೃಷ್ಣದೇವರಾಯನ ಆಡಳಿತವು ನಗರ ನಿರ್ಮಾಣ, ಕಲೆ, ಶಿಲ್ಪ ಸಂಗೀತ ಧಾರ್ಮಿಕ ಮೊದಲಾದ ಕ್ಷೇತ್ರಗಳಿಗೆ ಪ್ರೋತ್ಸಾಹ ನೀಡಿದಂತೆ ಪರಿಸರಕ್ಕೂ ಅದೇ ಪ್ರಕಾರದ ಗಮನ ಮತ್ತು ಆದ್ಯತೆಯನ್ನು ಕೊಟ್ಟಿರುವುದು ಈ ಶಾಸನದ ಪಾಠದಿಂದ ತಿಳಿದು ಬರುತ್ತದೆ.

ಈ ಶಾಸನದ ಪಾಠವನ್ನು ವಿದ್ವಾಂಸರು ಈ ರೀತಿ ವಿಶ್ಲೇಷಣೆ ಮಾಡಿದ್ದಾರೆ, ನಾಗಭೂವನ ಮಗ ನು ಮರಳ ಕೋಡಿ ಮಯಿಲಾರ ದೇವರಿಗೆ ದಾನವಾಗಿ ನೀಡುತ್ತಾನೆ. ಈ ಹಣವನ್ನು ಗಿಡಗಳನ್ನು ಬೆಳೆಸಿದವರಿಗೆ ಮತ್ತು ಕಾಲುವೆಯನ್ನು ತೋಡಿದವರಿಗೆ ನೀಡಬೇಕೆಂದು ತಿಳಿಸಿದೆ. ಮರಗಳನ್ನು ನೆಡುವವನಿಗೆ ಆರುನೂರು. ಹೊನ್ನು, ಕಾಲುವೆಯನ್ನು ತೋಡಿ ನಿರ್ಮಿಸುವವನಿಗೆ ಒಂದು ಪಾಲು ಹಾಗೂ ನೆಟ್ಟು ಸಸಿಗಳನ್ನು ಬೆಳೆಸುವ ವನಿಗೆ ಪಾಲು ನೀಡಬೇಕೆಂದು, ಈ ರೀತಿ ಮರಗಳನ್ನು ನೆಡುವುದಕ್ಕಾಗಿ ಮತ್ತು ತೋಪನ್ನು ಸಜ್ಜು ಮಾಡಲು ಸಾರ್ವಜನಿಕರಿಗೆ ಹೊನ್ನನ್ನು ದಾನವಾಗಿ ಕೊಡುವಂತೆ ಇದರಲ್ಲಿ ಬರೆಸಲಾಗಿದೆ.

ಈ ಶಾಸನ ಪರಿಸರ ಕಾಳಜಿಯಿಂದ ಆಸಕ್ತರ ಗಮನವನ್ನು ಸೆಳೆಯುತ್ತಿದೆ. ನಾವು ಈ ಹೊತ್ತಿನಲ್ಲಿ ಪರಿಸರದ ಬಗ್ಗೆ ಕಾಳಜಿ ವಹಿಸುವ ಮಾತನಾಡುವ ಗಿಡಮರಗಳನ್ನು ಬೆಳೆಸುವ ಕಾರ್ಯ ಮಾಡುತ್ತಿರುವಾಗ ಸುಮಾರು 400 ವರ್ಷಗಳ ಹಿಂದೆಯೇ ಹಂಪಿಯ ನಗರಾಭಿವೃದ್ಧಿಯ ಜೊತೆಗೆ ಗಿಡಗಳನ್ನು ಬೆಳೆಸಿ ಸಂರಕ್ಷಿಸಬೇಕೆನ್ನುವ ಕೃಷ್ಣದೇವರಾಯರ ಆಡಳಿತದ ಆಲೋಚನೆ, ಕಾಳಜಿ ಕಾರ್ಯ ನಮಗೆಲ್ಲ ಮಾದರಿಯಾಗಿದೆ. ಪರಿಸರದ ಕಾಳಜಿಯ ಈ ಶಾಸನವನ್ನು ಪರಿಸರ ಪ್ರೇಮಿಗಳು ಆಸಕ್ತರು ಹಸಿರು ಶಾಸನ ವೆಂದೇ ಕರೆಯುವುದು ರೂಡಿಯಲ್ಲಿದೆ. ಇಷ್ಟೇ ಅಲ್ಲ ಹಲವು ಶಾಸನಗಳಲ್ಲಿ ದೇವರಿಗೆ ಪೂಜಾ ಕೈಕಾರ್ಯಗಳಿಗೆ ಪೂಜಾರಿಗಳಿಗೆ ಬ್ರಾಹ್ಮಣರಿಗೆ ಗದ್ದೆ ಹೊಲ ತೋಟಗಳನ್ನು ನೀಡುವುದು ಒಂದು ಕಡೆಯಾದರೆ ದೇವಸ್ಥಾನದ ಪೂಜಾ ಕಾರ್ಯಗಳಿಗಾಗಿಯೇ ಹೂವಿನ ತೋಟಗಳನ್ನು ಬೃಂದಾವನಗಳನ್ನು ತೆಂಗಿನ ತೋಟಗಳನ್ನು ಸಹ ಪ್ರತ್ಯೇಕವಾಗಿ ಬೆಳೆಸುವ ಪದ್ಧತಿಯು ವಿಜಯನಗರ ಸಾಮ್ರಾಜ್ಯದಲ್ಲಿ ಇದ್ದುದ್ದನ್ನು ಶಾಸನಗಳಿಂದ ಗ್ರಹಿಸಬಹುದಾಗಿದೆ. ಅಂದರೆ ದೇವಸ್ಥಾನದ ದೇವರುಗಳ ಪೂಜೆಗಳಿಗೆ ಹೂವು ಕಾಯಿಗಳ ಕಾರ್ಯದ ಸೇವೆ ಒಂದು ಕಡೆಯಾದರೆ, ಹೂವಿನ ಹಣ್ಣಿನ ಗಿಡಮರಗಳನ್ನು ಬೆಳೆಸುವ ಮೂಲಕ ಪ್ರಕೃತಿಯನ್ನು ಪೋಷಿಸುವ ಕೆಲಸವು ಅದೇ ಸಮಯಕ್ಕೆ ನಡೆದಿದೆ ಎಂದರೆ ತಪ್ಪಾಗಲಾರದು.

ವಿಜಯನಗರ ಸಾಮ್ರಾಜ್ಯದಲ್ಲಿ ಪರಿಸರದ ಕಾಳಜಿ ಎದ್ದು ಕಾಣುತ್ತದೆ ಶ್ರೀ ವಿರೂಪಾಕ್ಷ ದೇವಸ್ಥಾನದ ಹಿಂಭಾಗದಲ್ಲಿ ಕೋತಿ ಇನಾಮು ಎನ್ನುವ ಒಂದು ಸ್ಥಳವಿದ್ದು ಈ ಸ್ಥಳದಲ್ಲಿಬಾಳೆ ಹಣ್ಣಿನ ತೋಟಗಳನ್ನು ಬೆಳೆಸಿ ಇಲ್ಲಿಯ ಪ್ರಾಣಿ ಪಕ್ಷಿಗಳಿಗೆ ಅವುಗಳನ್ನು ತಿನ್ನಲು ಬಿಟ್ಟಿರುವುದು ಇವರ ವನ್ಯಜೀವಿಗಳ ಬಗ್ಗೆ ಅವರುಗಳ ಕಾಳಜಿಯನ್ನು ತೋರಿಸುತ್ತದೆ. ಇಂದಿಗೂ ಇದನ್ನು ಕೋತಿ ಇನಾಮ ಎಂದೇ ಕರೆಯಲಾಗುತ್ತಿದೆ.

ಹಂಪಿಯ ಈ ಹಸಿರು ಶಾಸನವು ಗಾತ್ರದಲ್ಲಿ ಚಿಕ್ಕದಾಗಿದ್ದರು ಅದರ ಸಂದೇಶ ಮತ್ತು ಪರಿಣಾಮದಲ್ಲಿ ಬೃಹತ್ ಆಗಿದೆ. ಇಂದಿನ ಬದಲಾದ ಹವಮಾನದ ಕಾಲಘಟ್ಟದಲ್ಲಿ ನಾವು ಪರಿಸರವನ್ನು ಸ್ವಚ್ಛವಾಗಿರಿಸಿಕೊಳ್ಳುವ ವಾತಾವರಣವನ್ನು ಶುದ್ಧಿಗೊಳಿಸುವ ಆಲೋಚನೆ ಕಾರ್ಯಕ್ರಮಗಳ ಯೋಜನೆಗಳನ್ನು ರೂಪಿಸುತ್ತಿರುವ ಕಾಲದಲ್ಲಿ ಇರುವಾಗ ಸುಮಾರು 400 ವರ್ಷಗಳ ಹಿಂದೆಯೇ ಪರಿಸರದ ಬಗ್ಗೆ ಕಾಳಜಿ ವಹಿಸಿ ಗಿಡ ಮರ ತೋಪು ಬೆಳೆಸುವವರಿಗೆ ಪ್ರೋತ್ಸಾಹ ನೀಡಿ ಅಂಥವರಿಗೆ ಹೊನ್ನನ್ನು ದಾನವಾಗಿ ಕೊಡುವಂತ ವಿಚಾರವೇ ಆಶ್ಚರ್ಯ ಪಡುವಂತಹದ್ದಾಗಿದೆ. ಕೃಷ್ಣದೇವರಾಯನ ಈ ಹಸಿರು ಶಾಸನದಿಂದ ನಾವೆಲ್ಲ ನಮ್ಮ ಆಲೋಚನೆಗಳನ್ನು ಬದಲಿಸಿಕೊಂಡು ಇಂದಿನ ಮಕ್ಕಳಿಗೆ ಈ ರೀತಿಯ ಶಾಸನಗಳ ಪಾಠಗಳನ್ನು ಅವರ ಶಾಲಾಪಠ್ಯಗಳಲ್ಲಿ ಸೇರಿಸಿ ಅವರಿಗೆ ಬೋಧಿಸುವುದು ಪರಿಸರ ಪ್ರಜ್ಞೆಯನ್ನು ಬೆಳೆಸುವುದು ಇಂದಿನ ಅವಶ್ಯವಾಗಿದೆ. ಇದಕ್ಕೆ ನಮ್ಮ ಶಿಕ್ಷಣ ತಜ್ಞರು ಈ ಶಾಸನವನ್ನು ಶೈಕ್ಷಣಿಕ ಪಠ್ಯಪುಸ್ತಕಗಳಲ್ಲಿ ಸೇರಿಸಿ ಮಕ್ಕಳಿಗೆ ಬೋಧಿಸುವಂತೆ ಮಾಡುವುದು ಅತ್ಯಂತ ಅವಶ್ಯವಾದ ಕಾರ್ಯವಾಗಿದೆ. ಶಿಕ್ಷಣ ತಜ್ಞರು ಪಠ್ಯಪುಸ್ತಕಗಳನ್ನು ರಚಿಸುವಂಥವರು, ಸರ್ಕಾರ ಈ ಬಗ್ಗೆ ಚಿಂತಿಸಬೇಕಾಗಿದೆ.

# ಪಾಸು, ಫೇಲಾದ ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದ ಕೆ.ಪಿ ಮೋಹನ್ ರಾಜ್

■ **ಹಂಪಿ ಟೈಮ್ಸ್ ಕೊಪ್ಪಳ**

ಫಲಿತಾಂಶ ಸುಧಾರಣೆ ಹಿನ್ನೆಲೆಯಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪಾಸು ಮತ್ತು ಫೇಲಾದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಮಕ್ಕಳಿಂದ ಸಲಹೆ ಪಡೆಯುವ ವಿನೂತನ ಕಾರ್ಯಕ್ರಮವು ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಪಂಚಾಯತಿಯ ಆಡಳಿತಾಧಿಕಾರಿಗಳಾದ ಕೆ.ಪಿ ಮೋಹನ್ ರಾಜ್ ಅವರಿಂದ ಜುಲೈ 13ರಂದು ನಡೆಯಿತು.





ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ಮಕ್ಕಳು ಮತ್ತು ಶಿಕ್ಷಕರೊಂದಿಗೆ ಚಿಂತನ ಮಂಥನ ನಡೆಸಬೇಕು. ಪರಿಕಲ್ಪನೆ ಯೊಂದಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರಜಾ ದಿನವಾದ ಎರಡನೇ ಶನಿವಾರದಂದು ಸಹ ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಸಂವಾದ ಕಾರ್ಯಕ್ರಮ ನಡೆಸಿದ್ದು ವಿಶೇಷವಾಗಿತ್ತು.

ಸಂವಾದ ಕಾರ್ಯಕ್ರಮ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತಿಯ ಜೆ.ಹೆಚ್.ಪಟೇಲ್ ಸಭಾಂಗಣ ದಲ್ಲಿ ಜಿಲ್ಲೆಯ ವಿವಿಧ ಶಾಲೆಯ ವಿದ್ಯಾರ್ಥಿಗಳು ಮತು ಶಿಕ್ಷಕರು ಆಗಮಿಸಿದ್ದರು. ಪೂರ್ವ ನಿಗದಿಯಂತೆ ಸಂವಾದ ಕಾರ್ಯಕ್ರಮ ಬೆಳಗ್ಗೆ 11.30ಕ್ಕೆ ಆರಂಭವಾಗಿ ಸುಧೀರ್ಘ 3 ಗಂಟೆಗಳ ಕಾಲ ನಡೆಯಿತು. ಸಂವಾದ ನಡೆಸುವ ಪೂರ್ವದಲ್ಲಿ ಕಾರ್ಯದರ್ಶಿಗಳು, ತಮ್ಮ ಬಾಲ್ಯದ ಜೀವನ, ಓದಿನ ದಿನಗಳು, ಐಎಎಸ್ ಪಾಸು ಮಾಡಲು ತಾವು ಪಟ್ಟ ಶ್ರಮದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು. ನಮ್ಮ ತಂದೆ ಎಸ್ಸೆಸ್ಸಲ್ಸಿ ಫೇಲಾಗಿದ್ದರು. ತಾಯಿ ಎಸ್ಸೆಸ್ಸೆಲ್ಸಿ ಫಾಸಾಗಿದ್ದರು. ನಮ್ಮದು ಮಧ್ಯಮ ವರ್ಗದ ಕುಟುಂಬ. ಕಷ್ಟಪಟ್ಟು ಓದಿದೆ. ಐಎಎಸ್ ಪಾಸು ಮಾಡಲೇಬೇಕು ಎಂದು ಹಠತೊಟ್ಟು ಓದಿ ಆ ಗುರಿ ತಲಿಪಿದೆ ಎಂದು ವಿದ್ಯಾರ್ಥಿಗಳಿಗೆ ತಮ್ಮ ಜೀವನಗಾಥೆಯ ಬಗ್ಗೆ ತಿಳಿಸಿ ಸಂವಾದದಲ್ಲಿ ಭಾಗಿಯಾಗುವಂತೆ ವಿದ್ಯಾರ್ಥಿಗಳಿಗೆ ಪ್ರೇರೇಪನೆ ನೀಡಿದರು.

ಸೋಲೆ ಗೆಲುವಿನ ಮೆಟ್ಟಿಲು : ಸೋಲೇ ಗೆಲುವಿನ ಮೆಟ್ಟಿಲು ಆಗಿದೆ. ಪರೀಕ್ಷೆಯಲ್ಲಿ ಫೇಲಾದ ಮಕ್ಕಳು ಯಾವುದೇ ರೀತಿ ಕುಗ್ಗದೇ ಮತ್ತೆ ಪರಿಶ್ರಮದೊಂದಿಗೆ ಪರೀಕ್ಷೆ ಬರೆದು ಉತ್ತೀರ್ಣ ರಾಗಬೇಕು. ದೇಶದಲ್ಲಿಯೇ ಅತ್ಯಂತ ಕಠೀಣ ಪರೀಕ್ಷೆಯಾದ ಐಎಎಸ್ ಪರೀಕ್ಷೆಗಾಗಿ ಹಲವಾರು ಜನ ಪರೀಕ್ಷೆ ಬರುಯುತ್ತಾರೆ. ಅದರಲ್ಲಿ ಕೆಲವೇ ಕೆಲವರಿಗೆ ಸಫಲತೆ ಸಿಗುತ್ತದೆ. ಆದರೆ, ಸಫಲತೆ ಸಿಗದ ಅಭ್ಯರ್ಥಿಗಳು ಮತ್ತೆ ಮತ್ತೆ ಪ್ರಯತ್ನ ಮಾಡಿ ತಮ್ಮ ಗುರಿಯನ್ನು ತಲುಪುತ್ತಾರೆ. ಮದುವೆಯಾದ ಬಳಿಕ ಐಎಎಸ್ ತೇರ್ಗಡೆಯಾದ ಹಲವಾರು ನಿದರ್ಶನಗಳು ನಮ್ಮ ಮುಂದಿವೆ. ಅದರಂತೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅನುತ್ತೀರ್ಣವಾದ ಮಕ್ಕಳು ಯಾವೂದೇ ರೀತಿಯ ಭಯ ಪಡುವ ಅವಶ್ಯ ಕತೆಯಿಲ್ಲ ಎಂದು ತಿಳಿಸಿದರು. ರಾಜಕೀಯ, ಕ್ರೀಡಾ ಹಾಗೂ ಇತರೆ ಸ್ಪರ್ಧೆಗಳು ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಸೋಲು–ಗೆಲವು ಸರ್ವ ಸಾಮಾನ್ಯವಾಗಿದೆ. ಸೋಲು ಅನುಭವಿ ಸಿದವರು ಯಾರೂ ಸಹ ಹಿಂದೆ ಸರಿಯುವುದಿಲ್ಲ. ಯಾವುದೇ ಸೋಲು ನಿರಂತರವಲ್ಲ. ಇದಕ್ಕೆ ಕಾರಣ ಏನು ಎಂಬುವುದನ್ನು ಅರಿತುಕೊಂಡು ಮತ್ತೆ ಪ್ರಯತ್ನಿಸಬೇಕಷ್ಟೇ. ಅಂತೆಯೇ ವಿದ್ಯಾರ್ಥಿ ಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಾದ ಸೂಲಿಗೆ ಭಯ ಪಡದೇ ಮತ್ತೊಮ್ಮೆ ಪ್ರಯತ್ನಿಸಿ ಗೆಲುವನ್ನು ಸಾಧಿಸಬೇಕು. ಮೊದಲು ವಿದ್ಯಾರ್ಥಿಗಳು ನಾವು ಮತ್ತೆ ಪ್ರಯತ್ನಿಸಿ ಸಫಲವಾಗುತ್ತೇವೆ ಎಂಬ ಆತ್ಮ ವಿಶ್ವಾಸ ಹೊಂದಬೇಕು. ಪ್ರತಿನಿತ್ಯ ಎಂಟು ತಾಸು ಗಳ ಕಾಲ ವಿದ್ಯಾಭ್ಯಾಸ ಮಾಡುವ ಹವ್ಯಾಸವನ್ನು ಬೆಳಿಸಿ ಕೊಳ್ಳಬೇಕು ಎಂದರು.

ಜಿಲ್ಲಾಪಂಚಾಯತ್‌ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ ಅವರು ಮಾತನಾಡಿ, ಕೊಪ್ಪಳ ಜಿಲ್ಲೆಯ ಹಿಂದಿನ ಎಸ್ಸೆಸ್ಸೆಲ್ಸಿ ಫಲಿತಾಂಶವು ಶೇ.90ಕ್ಕಿಂತ ಹೆಚ್ಚಿತ್ತು. ಈ ಬಾರಿ ಕಡಿಮೆ ಇದೆ. ಫಲಿತಾಂಶ ಕಡಿಮೆಗೆ ಶಿಕ್ಷಣ ಇಲಾಖೆಯವರು ವಿವಿಧ ಕಾರಣಗಳನ್ನು ನೀಡಿದ್ದಾರೆ. ಪರೀಕ್ಷೆಯಲ್ಲಿ ಮಕ್ಕಳಿಗಾದ ಸಮಸ್ಯೆ ಗಳನ್ನು ತಿಳಿಯಲು ಈ ಸಂವಾದ ಕಾರ್ಯ ಕ್ರಮವನ್ನು ಆಯೋಜಿಸಲಾಗಿದೆ. ಮಕ್ಕಳು ನಿಮ್ಮ ಸಮಸ್ಯೆಯನ್ನು ಮುಕ್ತವಾಗಿ ಹೇಳಿ. >>4

**ಕವಿ ಮನಸು**

## ಬಂಗಾರಿ ಮೊಗದಲ್ಲಿ ಸಿಂಗಾರವಿಲ್ಯಾಕ



ಬಂಗಾರಿ ಮೊಗದಲ್ಲಿ ಸಿಂಗಾರವಿಲ್ಯಾಕ
ಸಿಂಗಾರಕೆ ಇಂದು ಬರ ಬಂದಿತ್ಯಾಕ
ಸಿಟ್ಟು ಸೆಡವು ಒಳ್ಳೇದಲ್ಲ ಆರೋಗ್ಯಕ್ಕ
ಮಾತಾಡೋಣ ಅಂದ್ರೆ ನೀ ಬರವಲ್ಯಾಕ

ಪಟ್ ಪಟಿ ಮ್ಯಾಲೆ ಪ್ಯಾಟಿಗೆ ಹೋಗುನು
ರಾಜಕುಮಾರ ಸಿನಿಮಾನ ನೋಡೂನು
ಬರುವಾಗ ಹಂಗ ಹೋಟೆಲ್ಕ ಹೋಗೂನು
ಅಲ್ಲೇ ಊಟ ನಾಷ್ಟಾ ಎಲ್ಲ ಮಾಡೂನು

ಧನ ಕನಕ ಒಂದೂನು ಬೇಡಿಲ್ಲ ನೀನು
ವಸ್ತ್ರ ಒಡವೆಗಾಗಿ ಕಾಡಿಲ್ಲ ಎಂದೂ ನೀನು
ಮನೆಯಲ್ಲೇ ಇರು ಎಂದವಳಲ್ಲವೇನು
ಮನೆಯಲ್ಲಿರಲು ಬಾಳ ಬಂಡಿ ನಡೆವುದೇನು

ಗಟ್ಟಿ ಚಿನ್ನದ ಬಿಸ್ಕೆಟ್ಟು ಕೇಳದವಳು ನೀನು
ಗ್ಲುಕೋಜು ಗುಡ್ ಡೇ ಕೇಳಿದವಳು ನೀನು
ಇದ್ದುದರಲ್ಲಿಯೇ ಬಾಳು ನಡೆಸೋಳು ನೀನು
ಇಂದ್ಯಾಕ ಮುಖ ಸೊಟ್ಟ ಮಾಡಿರುವೆ ಜಾನು

ಬರುವಾಗ ಮಲ್ಲಿಗೆ ಹೂವ ತರುವೆನು
ನಗುಮೊಗವ ತೋರು ನೀನು
ಬಾಳಿನ ಕಡಲಿದು ಬಹುದೂರ ಹಾದಿ
ಸಂತಸದಿ ಬಾಳಿದರೆ ಸಿಗುವುದು ನೆಮ್ಮದಿ

– ಕೆ ಎಂ ಬಸವರಾಜ
ಹೊಸಪೇಟೆ

# ಅನ್ನದ ಋಣ



ಶಿವಪುರದಲ್ಲಿ ಅಷ್ಟೇ ಅಲ್ಲ ಸುತ್ತಮುತ್ತಲಿನ ಹತ್ತು ಹಳ್ಳಿಯಲ್ಲಿ ಯಾರನ್ನು ಬೇಕಾದರೂ ಕೇಳಿ, ಹಿರಿಗೌಡರ ಮನೆತನದ ಬಗ್ಗೆ ಮನೆಯ ಹಿರಿಯರಾದ ರುದ್ರಗೌಡರ ಬಗ್ಗೆ, ಅವರ ದಾನ ಧರ್ಮದ ಬಗ್ಗೆ, ಆ ಮನೆತನತನದ ಹಿರಿಮೆ ಗರಿಮೆಗಳ ಬಗ್ಗೆ ಯಾರು ಬೇಕಿದ್ದರು ಅತ್ಯಂತ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಅದಕ್ಕೆಲ್ಲ ಕಾರಣ ಆ ಮನೆಯಲ್ಲಿನ ಜನರು ಮತ್ತು ಅವರು ಪಾಲಿಸಿಕೊಂಡು ಬಂದಿರುವ ರೀತಿ–ನೀತಿಗಳು, ಆಚಾರ–ವಿಚಾರಗಳು, ಹಿತ–ಮಿತ ಮತ್ತು ಅಗತ್ಯ ಮತ್ತು ಅನಿವಾರ್ಯಗಳ ಅರಿವು ಆ ಮನೆತನವನ್ನು ಸುತ್ತಮುತ್ತಲಿನ ಊರುಗಳಲ್ಲೂ ಸಹ ಅಷ್ಟೊಂದು ಚಿರ ಪರಿಚಿತರನ್ನಾಗಿಸುತ್ತು.

ಆ ದಿವಸ ಗೌಡರ ಮನೆಯಲ್ಲಿ ಸಂಭ್ರಮದ ವಾತಾವರಣ ಎಲ್ಲರಲ್ಲೂ ಒಂದು ರೀತಿಯ ಸಡಗರ ಪ್ರತಿಯೊಬ್ಬರೂ ಒಂದಿಲ್ಲೊಂದು ಕೆಲಸ ಕಾರ್ಯಗಳಲ್ಲಿ ಚಟುವಟಿಕೆಯಿಂದ ತೊಡಗಿಸಿಕೊಂಡಿದ್ದರು. ಏಕೆಂದರೆ ಆ ದಿವಸ ರುದ್ರ ಗೌಡರ ಮನೆಗೆ ಅತಿಥಿಗಳು ಬರುವವರಿದ್ದರು.

ಹರಣಿ ರುದ್ರೇಗೌಡರ ಏಕೈಕ ಮೊಮ್ಮಗಳು, ಕೊಟ್ರಗೌಡರ ಮಗಳು. ದೂರದ ಬೆಂಗಳೂರಿನಿಂದ ಚಲಪತಿ ಮತ್ತು ದಂಪತಿಗಳು ಅವರ ಮಗನೊಂದಿಗೆ ಗೌಡರ ಮನೆಗೆ ವಧು ಅನ್ವೇಷಣೆಗೆಂದು ಬರುವವರಿದ್ದರು. ಎಂದಿನಂತೆ ಮನೆಯ ದೈನಂದಿನ ಕಾರ್ಯಗಳನ್ನು ಮುಗಿಸಿ ರುದ್ರ ಗೌಡರು ಮನೆಯ ಅಂಗಳದಲ್ಲಿ ಏನನ್ನೋ ಆರಿಸುತ್ತ ಕುಳಿತಿದ್ದರು, ಇನ್ನೇನು ಅವರು ಬಂದು ಬಿಡುತ್ತಾರೆ, ಆದಷ್ಟು ಬೇಗ ಎಲ್ಲಾ ಕೆಲಸಗಳನ್ನು ಮುಗಿಸಿಕೊಂಡು ಬರುವ ಗಂಡಿನ ಕಡೆಯವರಿಗಾಗಿ ಕಾಯುತ್ತ ನಿಂತಿದ್ದರು.

ದೊಡ್ಡದಾದ ಮೊಟರ್ ಕಾರಿನಲ್ಲಿ ಬಂದಿಳಿದ ಹುಡುಗ ಮತ್ತು ಅವರ ಜೊತೆಯಲ್ಲಿ ಹತ್ತನ್ನೆರಡು ಜನ ಗೌಡರ ಮನೆಯನ್ನು ದೂರದಿಂದಲೆ ನೋಡಿ ಎಷ್ಟೊಂದು ದೊಡ್ಡ ಮನೆ ಅಬ್ಬಾ ಈ ಮನೆಯನ್ನು ನೋಡಿಕೊಳ್ಳಲು ಹತ್ತಿಪ್ಪತ್ತು ಕೆಲಸಗಾರರು ಬೇಕಾಗುತ್ತಾರೆ ಎನ್ನುತ್ತಾ ಹುಡಗನ ತಂದೆ, ತಾಯಿ ಕಿವಿಯಲ್ಲೆ ಪಿಸುಗುಟ್ಟುತ್ತಾ ಕಾರಿನಿಂದ ಕೆಳಗಿಳಿದರು. ಹುಡುಗನು ಸಹ ಬೆರಗು ಕಣ್ಣಿನಿಂದ ಮನೆಯನ್ನು ನೋಡುತ್ತ ಅಲ್ಲೇ ಅಂಗಳದಲ್ಲಿದ್ದ ರುದ್ರ ಗೌಡರನ್ನು ಕಾಣುತ್ತಲೆ ಮನೆಯ ಕೆಲಸಗಾರನಿರಬಹುದು, ಅಂಗಳದಲ್ಲಿ ಬಿದ್ದಿರುವ ಜೋಳದ ಕಾಳುಗಳನ್ನು ಆಯುತ್ತ ಕುಳಿತಿದ್ದಾನೆ..! ಇಷ್ಟು ದೊಡ್ಡ ಕುಟುಂಬ ಎನ್ನುತ್ತಾರೆ ಮೇಲಾಗಿ ಸುತ್ತಮುತ್ತಲಿನ ಹತ್ತು ಹಳ್ಳಿಗಳಿಗೆ ಇವರೇ ಸಿರಿವಂತರು ಎಂದು ಬೇರೆ ಹೇಳುವುದನ್ನು ಕೇಳಿದ್ದೆ ಇಲ್ಲಿ ನೋಡಿದರೆ ಈ ಮುದುಕ ಅಂಗಳದಲ್ಲಿ ಬಿದ್ದಿರುವ ಹಿಡಿ ಜೋಳದ ಕಾಳುಗಳನ್ನೂ ಬಿಡದೆ ಆಯ್ದು ಕೊಳ್ಳುತ್ತಿದ್ದಾನೆ ಎಂದು ಮಾತನಾಡಿಕೊಳ್ಳುತ್ತ ಮನೆಯ ಒಳಗೆ ಹೋದನು.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Hampi Times E-paper
SCAN AND READ

ಮನೆಯಲ್ಲಿ ಒಂದು ರೀತಿಯ ಸಂಭ್ರಮದ ವಾತಾವರಣ ತುಂಬಿತ್ತು ವಧುವನ್ನು ನೋಡುವ ಶಾಸ್ತ್ರ ಮುಗಿಯುತು. ಮನೆಗೆ ಬಂದಂತಹ ಎಲ್ಲಾ ಅತಿಥಿಗಳನ್ನು ಊಟಕ್ಕೆ ಕರೆದು ಪಂಕ್ತಿಯಲ್ಲಿ ಕುಳ್ಳರಿಸಿ ತಟ್ಟೆಗಳನ್ನು ನೀಡಿ ಆ ಮನೆಯ ಯಜಮಾನಿ ಶಾಂತಕ್ಕನವರು ಎಲ್ಲರ ತಟ್ಟೆಯಲ್ಲಿ ಮುತ್ತು ರತ್ನ ಒಡವೆ ವಜ್ರ ಖಚಿತ ಹಾರಗಳನ್ನು ಊಟಕ್ಕೆ ಎಂದು ನೀಡಿದಳು..! ಇದನ್ನೆಲ್ಲ ಗಮನಿಸಿದ ಹುಡುಗನ ತಂತೆ ಮತ್ತು ತಾಯಿಗೆ ಆಶ್ಚರ್ಯ ಮತ್ತು ಆತಂಕವಾಯಿತು. ಒಡನೆ ಹಿರಿಯರಾದ ರುದ್ರೆ ಗೌಡರನ್ನು ಈ ಕುರಿತು ವಿಚಾರಿಸುತ್ತ, ಇದೇನು ರುದ್ರೇ ಗೌಡರೆ ಊಟಕ್ಕೆಂದು ಹೊನ್ನನ್ನು ನೀಡಿದರೆ ಉಣ್ಣಲಾದೀತೆ? ನಿಮ್ಮ ಬಳಿ ಎಷ್ಟೇ ಸಂಪತ್ತು ಇದ್ದರೂ ಹೊಟ್ಟೆಗೆ ಮಾತ್ರ ಹಿಟ್ಟೆ ಬೇಕಲ್ಲವೆ? ದಯಮಾಡಿ ಅನ್ನವನ್ನು ನೀಡಿ ಈ ನಿಮ್ಮ ಸಂಪತ್ತು ಸಿರಿವಂತಿಕೆ ನಮಗೆ ಬೇಡ ಎಂದರು.

ಇದನ್ನೆಲ್ಲ ಕೇಳುತ್ತಾ ಸುಮ್ಮನೆ ನಿಂತಿದ್ದ ರುದ್ರೇಗೌಡರು ಹಿರಿಯರಾದ ತಾವು ನಮ್ಮನ್ನು ಮನ್ನಿಸಬೇಕು, ನಮ್ಮ ಉಪಚಾರದಲ್ಲಿ ಇನ್ನೂ ಏನೇದರು ಕಮ್ಮಿ ಆದರೆ ದಯಮಾಡಿ ತಿಳಿಸಿ, ಅಗತ್ಯ ಬಿದ್ದರೆ ಇನ್ನು ಧನ ಕನಕ ನಮ್ಮ ಬಳಿ ಇದೆ ಅದನ್ನೂ ಊಟಕ್ಕೆಂದು ನೀಡುತ್ತೇವೆ ಎಂದರು. ಇದನ್ನೇಲ್ಲ ಸುಮ್ಮನೆ ಕೇಳುತ್ತಾ ಕುಳಿತಿದ್ದ ವರ ಎದ್ದು ನಿಂತು ನೇರವಾಗಿ ರುದ್ರೇಗೌಡರ ಕಾಲಿಗೆ ನಮಸ್ಕರಿಸಿದನು. ಇದೆನ್ನೆಲ್ಲ ನೊಡುತ್ತಿದ್ದವರಿಗೆ ಏನೆಂಬುದು ಅರಿವಾಗಲಿಲ್ಲ ಹಾಗಾಗಿ ಎಲ್ಲರು ಆಶ್ಚರ್ಯಚಕಿತರಾಗಿ ವರನನ್ನು ನೋಡುತ್ತ ನಿಂತರು.

ಇದೆನ್ನೆಲ್ಲ ಗಮನಿಸಿದ ಆ ಹುಡುಗ ನಿಮಗೆಲ್ಲ ಆಶ್ಚರ್ಯವಾಗುತ್ತಿರಬಹುದು, ನನ್ನಿಂದ ಒಂದು ತಪ್ಪಾಗಿದೆ! ಎಂದು ಹೇಳುತ್ತ ನಾನು ಮನೆಯ ಒಳಗೆ ಬರುತ್ತಿದ್ದಾಗ ಅಂಗಳದಲ್ಲಿ ಈ ಹಿರಿಯರು ಅಲ್ಲೇ ಬಿದ್ದಿದ್ದ ಜೋಳದ ಕಾಳುಗಳನ್ನು ಆರಿಸಿಕೊಳ್ಳುತ್ತಿದ್ದರಲ್ಲ ಆಗ ಸುಮ್ಮನಿರದೆ ನಾನು ಈ ಹಿರಿಯರನ್ನು ಕುರಿತು ಇವರ ಮನೆಯಲ್ಲಿ ಇಷ್ಟೊಂದು ಸಂಪತ್ತು ಇರುವಾಗ ಅಲ್ಲಿಲ್ಲಿ ಬಿದ್ದಿರುವ ಹಿಡಿ ಜೋಳದ ಕಾಳುಗಳನ್ನು ಆರಿಸುತ್ತಿದ್ದಾರಲ್ಲ ಎಂದು ಅವರಿಗೆ ಕೇಳುವಂತೆಯೇ ಹೇಳಿಕೊಳ್ಳುತ್ತ ಒಳಗಡೆ ಬಂದೆನು. ಹಾಗಾಗಿ ಅವರಿಂದ ನಮ್ಮ ಊಟಕ್ಕೆ ಬಂಗಾರವನ್ನು ನೀಡಿದ್ದಾರೆ. ನನಗೆ ನನ್ನ ಮಾತಿನ ತಪ್ಪಿನ ಅರಿವು ಗೊತ್ತಾಯಿತು ಜೀವನದಲ್ಲಿ ನಾವು ಎಷ್ಟೇ ದೊಡ್ಡವರಾಗಲಿ, ಸಿರಿವಂತರಾಗಲಿ, ಎಂತಹದ್ದೇ ಉನ್ನತ ಹುದ್ದೆಯಲ್ಲಿರಲಿ ನಮ್ಮ ಊಟಕ್ಕೆ ಅನ್ನವೇ ಬೇಕು. ಹೊಟ್ಟೆಯ ಹಸಿವಿಗೆ ಹಿಟ್ಟೆ ಬೇಕು ಎನ್ನುವ ಸತ್ಯ ಅರಿವಾಯಿತು. ಪ್ರತಿಯೊಂದು ಕಾಳಿಗೂ ಅದರದೇ ಆದ ಬೆಲೆ ಇದೆ, ಹಾಗೆಯೇ ಪ್ರತಿ ಕಾಳಿನ ಮೇಲೆಯೂ ತಿನ್ನುವವರ ಹೆಸರನ್ನು ಬರೆದಿರುತ್ತದೆ ಎಂದು ಕೇಳಿದ್ದೆ ಅದು ಸತ್ಯವಾಯಿತು, ಹಿರಿಯರಾದ ತಾವು ನನ್ನನ್ನು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇನೆ ಎಂದನು.

ನಮ್ಮನ್ನು ಕ್ಷಮಿಸಿ ನಿಮ್ಮ ದೊಡ್ಡತನವನ್ನು ಅರಿತುಕೊಳ್ಳದೆ ನಮ್ಮಿಂದ ತಪ್ಪಾಯಿತು ಎಂದು ಹೇಳಿದಾಗ ಎಲ್ಲರಿಗು ನೆಡೆದ ಘಟನೆ ಏನೆಂದು ತಿಳಿಯುತು. ರುದ್ರೆಗೌಡರು ನಸು ನಗುತ್ತ ಆ ಹುಡಗನನ್ನು ಆತ್ಮಿಯತೆಯಿಂದ ಆಲಂಗಿಸಿಕೊಳ್ಳುತ್ತಾ ಅನ್ನದ ಋಣ ದೊಡ್ಡದು ಪ್ರತಿಯೊಂದು ತಿನ್ನುವ ಕಾಳಿನ ಮೇಲೆ ಅದನ್ನು ಯಾರ ತಿನ್ನಬೇಕು ಎವ್ನುವುದನ್ನು ಭಗವಂತ ಮೊದಲೇ ನಿರ್ಧರಿಸಿರುತ್ತಾನೆ. ಹಾಗಾಗಿ ನಾವು ಪ್ರತಿಯೊಂದು ಕಾಳನ್ನೂ ಸರಿಯಾಗಿ ಉಪಯೋಗಿಸಬೇಕು "ಅನ್ನ ಬ್ರಹ್ಮ ಸ್ವರೂಪಿ" ಎಂದು ಹರಿಸಿದನು ಎಲ್ಲರು ಸಂತೋಷವಾಗಿ ವಿವಿಧ ಭಕ್ಷಭೋಜನಗಳನ್ನು ಸವಿದು ಆನಂದಿಸಿದರು.

ಈ ಘಟನೆಯಿಂದಾಗಿ ಅಂದು ಆ ಮನೆಯಲ್ಲಿ ನೆರೆದಿದ್ದ ಎಲ್ಲರಿಗೂ ನಾವು ಸೇವಿಸುವ ಆಹಾರವನ್ನು ಎಂದಿಗೂ ಅನವಶ್ಯಕವಾಗಿ ಹಾಳು ಮಾಡಬಾರದು ಎನ್ನುವ ನೀತಿ ಗೊತ್ತಾಯಿತು. ಈ ಎಲ್ಲ ಘಟನೆಯನ್ನು ಕುತೂಹಲದಿಂದ ನೋಡುತ್ತಿದ್ದ ಮಕ್ಕಳು ಊಟ ಮಾಡುತ್ತ "ನಾವು ಸಹ ನಮಗೆ ಅಗತ್ಯವಿದ್ದಷ್ಟನ್ನೇ ತಟ್ಟೆಯಲ್ಲಿ ಹಾಕಿಸಿಕೊಳ್ಳಬೇಕು ಮತ್ತು ಹಾಕಿಸಿಕೊಂಡಿದ್ದನು ಪೂರ್ತಿಯಾಗಿ ಉಣ್ಣಬೇಕು ಎಂದು ತಮ್ಮ ತಮ್ಮಲ್ಲೆ ಮಾತನಾಡಿಕೊಳ್ಳುತ್ತಿದ್ದವು. ಅನ್ನವನ್ನು ತಿನ್ನುವ ಹಕ್ಕು ನಮಗಿದೆಯೆ ಹೊರತು ಅನ್ನವನ್ನು ಚಲ್ಲುವ ಹಕ್ಕು ನಮ್ಮದಲ್ಲ ಎನ್ನುವ ನೀತಿ ಎಲ್ಲರಲ್ಲೂ ಮನೆಮಾಡಿತು.

## ಆಶ್ರಯ ಕಳಚಿತು



ಮಾತೆಯ ಆಶ್ರಯ ಅರಿಯದೆ ಕಳಚಿತು
ಭೀತಿಯು ಬಂದಿತು ಮನದಲ್ಲಿ
ಘಾತಕವೆನಿಸುವ ದುರಿತವು ಬಂದಿತು
ಸೋತೆನು ನೋವಿನ ಸುಳಿಯಲ್ಲಿ

ತೊಟ್ಟದು ಕಳಚಲು ಬಿದ್ದೆನು ಕೆಳಗಡೆ
ತಟ್ಟನೆ ಹಿಡಿಯುವರಾರಿಲ್ಲ
ಹುಟ್ಟಿದ ಜೀವವು ಅಳಿಯುವ ದಿನವಿದು
ಹೊಟ್ಟೆಯು ದುಂಡಗೆ ಉಳಿದಿಲ್ಲ

ಹೆದರದೆ ಬಾಳಿದೆ ಅಮ್ಮನ ಮಡಿಲಲಿ
ಕದಲಿದ ಸಮಯದ ಅರಿವಿಲ್ಲ
ಉದರದ ಒಳಗಡೆ ಕೊಂಚವು ಉಳಿಯದೆ
ಚದುರಿದೆ ರಸ್ತೆಯ ತುಂಬೆಲ್ಲ

ಬದುಕಿದು ಮುಗಿದಿದೆ ಬಳಕೆಗೆ ದೊರಕದೆ
ಹದವನು ಮೀರಿದ ಹಣ್ಣಾಗಿ
ಮುದವನು ನೀಡದೆ ಬಯಸಿದ ಮಂದಿಗೆ
ಮುದುಡಿದೆ ಮನವಿದು ನೋವಾಗಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
HAMPI TIMES VIJAYANAGARA
Only Admins can Send Messages to this Group
Join for to Get Daily E-paper

# ಅಂಗನವಾಡಿ ಮೇಲ್ವಿಚಾರಕರಿಗೆ ಮೊಬೈಲ್ ಫೋನ್ ವಿತರಣೆ

### ಮಹಿಳಾ, ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಡೆದ ಕಾರ್ಯಕ್ರಮ
### ವಿಜಯನಗರ ಕ್ಷೇತ್ರದ ಶಾಸಕ ಹೆಚ್.ಆರ್.ಗವಿಯಪ್ಪರಿಂದ ಉದ್ಘಾಟನೆ



■ ಹಂಪಿ ಟೈಮ್ಸ್ ಹೊಸಪೇಟೆ

ಅಂಗನವಾಡಿ ಮೇಲ್ವಿಚಾರಕರು ಮತ್ತು ಸಹಾಯಕಿಯರಿಗೆ ಮೊಬೈಲ್ ಫೋನ್ ವಿತರಣೆ ಕಾರ್ಯಕ್ರಮವು ಶುಕ್ರವಾರ ನಡೆಯಿತು.

ಹೊಸಪೇಟೆಯ ಟೌನ್ ರೀಡಿಂಗ್ ಹಾಲ್ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಡೆದ ಕಾರ್ಯಕ್ರಮವನ್ನು ಶಾಸಕರಾದ ಹೆಚ್.ಆರ್.ಗವಿಯಪ್ಪ ಅವರು ಉದ್ಘಾಟಿಸಿ ಮಾತನಾಡಿ, ಶಿಕ್ಷಣದ ವಿವಿಧ ಹಂತಗಳಲ್ಲಿ ಶಾಲಾ ಪೂರ್ವ ಶಿಕ್ಷಣ ಹಂತ ಅತ್ಯಂತ ಮಹತ್ವದ್ದಾಗಿದೆ. ಮಕ್ಕಳ ಮನಸು ಸಾಕಷ್ಟು ಮೃದುವಾಗಿರುತ್ತದೆ. ಅಂಗನವಾಡಿಗಳಲ್ಲಿ ಮಕ್ಕಳಿಗೆ ಅನುಕೂಲಕರ ಶಿಕ್ಷಣ ಲಭ್ಯವಾದಲ್ಲಿ ಅವರ ಭವಿಷ್ಯ ಉಜ್ವಲವಾಗಲಿದೆ. ಈ ನಿಟ್ಟಿನಲ್ಲಿ ಅಂಗನವಾಡಿಗಳನ್ನು ಸಬಲೀಕರಣಗೊಳಿಸಲಾಗುತ್ತದೆ. ವೈಜ್ಞಾನಿಕವಾಗಿನಾವುಸಾಕಷ್ಟುಮುಂದುವರೆಯುತ್ತಿದ್ದೇವೆ. ತಾಂತ್ರಿಕ ಸಾಧನಗಳ ಮೂಲಕವು ಸಹ ಪ್ರಚಲಿತ ಮಾಹಿತಿ ಪಡೆದುಕೊಂಡು ಪ್ರಸ್ತುತ ಕಾಲಕ್ಕೆ ಹೊಂದಿಕೊಂಡು ಉತ್ತಮವಾಗಿ ಮಕ್ಕಳಿಗೆ ಮಾರ್ಗ ದರ್ಶನ ಮಾಡುವ ನಿಟ್ಟಿನಲ್ಲಿ, ಜವಾಬ್ದಾರಿಯುತ ಸ್ಥಾನದಲ್ಲಿರುವ ಅಂಗನವಾಡಿಗಳಲ್ಲಿನ ಮೇಲ್ವಿಚಾರ ಕಿಯರು ಮತ್ತು ಸಹಾಯಕಿಯರಿಗೆ ಮೊಬೈಲ್ ಪೋನ್ ವಿತರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಇದೆ ವೇಳೆ ಶಾಸಕರು ಅಂಗನವಾಡಿ ಮೇಲ್ವಿ ಚಾರಕಿಯರು ಮತ್ತು ಸಹಾಯಕಿಯರ ಅಹವಾಲನ್ನು ಸಹ ಆಲಿಸಿದರು. ಅಂಗನವಾಡಿ ನೌಕರರರಿಗೆ ಏನೇ ಸಮಸ್ಯೆಗಳಿರಲಿ ಅದನ್ನು ಪರಿಶೀಲಿಸಿ ನಿಯಮಾನುಸಾರ ಆದ್ಯತೆಯ ಮೇರೆಗೆ ಪರಿಹಾರ ಕಲ್ಪಿಸಲಾಗುವುದು ಎಂದು ಶಾಸಕರು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಶ್ವೇತಾ ಅವರು ಮಾತನಾಡಿದರು.

ಸಮಾರಂಭದಲ್ಲಿ ಹೂಡಾ ಅಧ್ಯಕ್ಷರಾದ ಇಮಾಮ್ ನಿಯಾಜಿ, ತಹಸೀಲ್ದಾರರಾದ ವಿಶ್ವಜಿತ್ ಮೆಹತಾ, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಹರೀಶ್, ಹೊಸಪೇಟೆ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸಿಂದು ಅಂಗಡಿ, ಜಿಲ್ಲಾ ನಿರೂಪಣಾಧಿಕಾರಿಗಳು ಸೇರಿದಂತೆ ಇನ್ನಿತರರು ಇದ್ದರು.

# ರಾಷ್ಟ್ರೀಯ ಪ್ರಶಸ್ತಿಗಳಿಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ

2024ನೇ ಸಾಲಿಗೆ ವಿಕಲಚೇತನ ವ್ಯಕ್ತಿಗಳ ಸಬಲೀಕರಣಕ್ಕಾಗಿ ನೀಡಲಾಗುವ ರಾಷ್ಟ್ರೀಯ ಪ್ರಶಸ್ತಿಗಳಿಗಾಗಿ ಆನ್‌ಲೈನ್‌ದಲ್ಲಿ ಮಾತ್ರ ಅರ್ಜಿಗಳನ್ನು, ನಾಮನಿರ್ದೇಶನಗಳನ್ನು ಆಹ್ವಾನಿಸಿಸಲಾಗಿದೆ.

ಸಚಿವಾಲಯದಿಂದ ವಿನ್ಯಾಸಗೊಳಿಸಲಾಗಿರುವ ಪಾಸ್‌ವರ್ಡ್ ಪ್ರೊಟೆಕ್ಟೆಡ್ ಸೆಂಟ್ರಲೈಸ್ಡ್ ಪೋರ್ಟಲ್‌ನಲ್ಲಿ www.awards.gov.in ಹಾಗೂ ಇಲಾಖೆಯ www.depwd.gov.in ವೆಬ್‌ಸೈಟ್ ಮೂಲಕ ಜಿಲ್ಲೆಯ ಅರ್ಹ ವಿಶೇಷ ವಿಕಲಚೇತನರು ಪ್ರಶಸ್ತಿಗೆ ಅರ್ಜಿಗಳನ್ನು ಸಲ್ಲಿಸಲು ಜುಲೈ 31ರವರೆಗೆ ಅವಕಾಶ ಕಲ್ಪಿಸಲಾಗಿದೆ.

ವೈಯಕ್ತಿಕ ಸಾಧನೆಗೆ ರಾಷ್ಟ್ರೀಯ ಪ್ರಶಸ್ತಿ: ಸರ್ವಶ್ರೇಷ್ಠ ದಿವ್ಯಾಂಗ ಜನರಲ್ಲಿ ಶಿಕ್ಷಣ, ಆರೋಗ್ಯ, ಉದ್ಯೋಗ, ಕಲೆ ಮತ್ತು ಸಂಸ್ಕೃತಿ, ಕ್ರೀಡೆ, ಸೃಜನಾತ್ಮಕ ಕಾರ್ಯ, ಅಂಗವಿಕಲ ವ್ಯಕ್ತಿಗಳ ಸಬಲೀಕರಣ, ಸಾಮಾಜಿಕ ಸೇವೆಗಳು ಇರುತ್ತವೆ. (ಆರ್‌ಪಿಡಬ್ಲ್ಯೂಡಿ ಕಾಯ್ದೆಯಡಿಯಲ್ಲಿ ಉಲ್ಲೇಖಿಸಲಾಗಿರುವ 21 ನಿರ್ಧಿಷ್ಠ ಅಂಗವಿಕಲತೆಗಳಲ್ಲಿನ ಯಾವುದೇ ಅಂಗ ವೈಕಲ್ಯತೆ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೂ ಮುಕ್ತವಾಗಿರುತ್ತದೆ.) ಶ್ರೇಷ್ಠ ದಿವ್ಯಾಂಗಜನರಲ್ಲಿ ಲೊಕೊಮೋಟರ್ ಅಂಗವೈಕಲ್ಯತೆ (ಲೊಕೊಮೋಟರ್, ಮಸ್ಕ್ಯೂಲರ್ ಡೈಸ್ಟ್ರೋಫಿ, ಡ್ವಾರ್ ಫಿಸಂ, ಆಸಿಡ್ ದಾಳಿ ಸಂತ್ರಸ್ತ, ಲೆಪ್ರಸಿ ಕ್ಯೂರ್ಡ್, ಸೆರೆಬ್ರಲ್ ಪಾಲ್ಸಿ), ದೃಷ್ಟಿಮಾಂದ್ಯರುಗಳಲ್ಲಿ (ಕುರುಡರು, ದೃಷ್ಠಿಹೀನತೆ), ಶ್ರವಣ ಮಾಂದ್ಯರುಗಳಲ್ಲಿ (ಕಿವುಡುತನ, ಕಠಿಣ ಶ್ರವಣ ಶಕ್ತಿ, ನುಡಿ ಮತ್ತು ಭಾಷೆ ವೈಕಲ್ಯತೆ,) ಬೌದ್ಧಿಕ ವೈಕಲ್ಯತೆಗಳಲ್ಲಿ (ಮಾನಸಿಕ ಅಸ್ವಸ್ಥ, ಮಾನಸಿಕ ನಡವಳಿಕೆ, ನಿರ್ದಿಷ್ಠ ಕಲಿಕಾ ವೈಕಲ್ಯತೆ, ಆಟಿಸಂ ಅಸ್ವಸ್ತತೆ) ನಿರ್ದಿಷ್ಠ ವೈಕಲ್ಯತೆ, ಹಿಮೊಫಿಲಿಯಾ, ಸಿಕಲ್ ಸೆಲ್ ಕಾಯಿಲೆಗಳು, ಗಂಭೀರ ನರವ್ಯೂಹ ಸ್ಥಿತಿಗಳು, ಮಲ್ಟಿಪಲ್ ಸ್ಕ್ಲೆರೊಸಿಸ್, ಪಾರ್ಕಿನ್ಸರ್ ಕಾಯಿಲೆ, ಬಹು ವೈಕಲ್ಯತೆ) ವ್ಯಕ್ತಿಗಳಿಗೆ ಪ್ರಶಸ್ತಿ ನೀಡಲಾಗುತ್ತದೆ.

ಸರ್ವಶ್ರೇಷ್ಠ ದಿವ್ಯಾಂಗ ಜನರಲ್ಲಿ ಬಾಲಕ/ಬಾಲಕಿ ಆರ್‌ಪಿಡಬ್ಲ್ಯೂಡಿ ಕಾಯ್ದೆಯಡಿಯಲ್ಲಿ ನಿರ್ದಿಷ್ಟ ಪಡಿಸಲಾಗಿರುವ ಯಾವುದೇ ಪ್ರವರ್ಗದಲ್ಲಿ (ಕಲೆ ಮತ್ತು ಸಂಸ್ಕೃತಿ, ವರ್ಣಕಲೆ, ಸಂಗೀತ ಅಥವಾ ಇನ್ನಿತರೆ ಮಾದರಿಯ ಸೃಜನಾತ್ಮಕ ಕಾರ್ಯ ಇತ್ಯಾದಿಗಳು) (18 ವರ್ಷದವರೆಗಿನ ಅಂಗವಿಕಲ ಮಕ್ಕಳಿಗಾಗಿ) ದಿವ್ಯಾಂಗ ಜನರಿಗಾಗಿ ಶ್ರಮಿಸುತ್ತಿರುವ ವ್ಯಕ್ತಿಗೆ, ದಿವ್ಯಾಂಗ ಕ್ಷೇತ್ರದಲ್ಲಿ ಪುನರ್ವಸತಿಗೆ ಶ್ರಮಿಸುತ್ತಿರುವ ವ್ಯಕ್ತಿಗೆ, ದಿವ್ಯಾಂಗ ಕ್ಷೇತ್ರದಲ್ಲಿ ಸರ್ವ ಶ್ರೇಷ್ಠ ಸಂಶೋಧನೆ, ಪರಿವರ್ತನೆ, ಉತ್ಪನ್ನ ಅಭಿವೃದ್ಧಿ ಕ್ಷೇತ್ರದಲ್ಲಿರುವವರಿಗೆ ಪ್ರಶಸ್ತಿ ನೀಡಲಾಗುವುದು.

ಅಂಗವಿಕಲ ವ್ಯಕ್ತಿಗಳ ಸಬಲೀಕರಣ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ಸಂಸ್ಥೆಗಳಿಗೆ ರಾಷ್ಟ್ರೀಯ ಪ್ರಶಸ್ತಿಗಳು (ಪ್ರಶಸ್ತಿಯ ಪ್ರವರ್ಗ): ದಿವ್ಯಾಂಗಜನರ ಸಬಲೀಕರಣಕ್ಕಾಗಿ ಶ್ರಮಿಸಿದ ಸರ್ವಶ್ರೇಷ್ಠ ಸಂಸ್ಥೆ (ಖಾಸಗಿ ಸಂಸ್ಥೆ, ಎನ್.ಜಿ.ಓ), ದಿವ್ಯಾಂಗ ಜನರಿಗಾಗಿ ಇರುವ ಸರ್ವಶ್ರೇಷ್ಠ ಸಂಸ್ಥೆ (ಸರ್ಕಾರಿ ಸಂಸ್ಥೆ, ಖಾಸಗಿ ಕ್ಷೇತ್ರ ಉದ್ದಿಮೆ, ಸ್ವಾಯತ್ತ ಅಂಗಗಳು, ಪ್ರೈವೆಟ್ ಸೆಕ್ಟರ್) ದಿವ್ಯಾಂಗ ಜನರಿಗಾಗಿ ಇರುವ ಸರ್ವಶ್ರೇಷ್ಠ ಪ್ಲೇಸ್‌ಮೆಂಟ್ ಏಜೆನ್ಸಿ (ಸರ್ಕಾರಿ, ರಾಜ್ಯ ಸರ್ಕಾರಿ, ಸ್ಥಳೀಯ ಅಂಗಗಳನ್ನು ಹೊರತುಪಡಿಸಿ) ಸುಗಮ್ಯ ಭಾರತ ಅಭಿಯಾನದ ಕಾರ್ಯನ್ವಯನ, ಬಾಧಾಮುಕ್ತ ವಾತಾವರಣ ಸೃಷ್ಟಿಸುವಲ್ಲಿ ಸರ್ವಶ್ರೇಷ್ಠ ರಾಜ್ಯ, ಕೇಂದ್ರಾಡಳಿತ ಪ್ರದೇಶ ಮತ್ತು ಜಿಲ್ಲೆಗಳಲ್ಲಿ ಸರ್ವಶ್ರೇಷ್ಠ ಸುಗಮ್ಯ ಯತಾಯತ್ ಕಾರ್ಯ ಸಾಧನ, ಸೂಚನ ಮತ್ತು ಸಂಚಾರ ಪ್ರೊದ್ಯೋಗಿಕಿ (ಸರ್ಕಾರಿ, ಖಾಸಗಿ ಸಂಸ್ಥೆ) ದಿವ್ಯಾಂಗ ಜನರ ಹಕ್ಕುಗಳ ಅಧಿನಿಯಮ, ಯು.ಡಿ.ಐ.ಡಿ ಮತ್ತು ದಿವ್ಯಾಂಗರ ಸಬಲೀಕರಣ ಇಲಾಖೆ ಇತರೆ ಯೋಜನೆಗಳ ನಿರ್ವಹಣೆಯಲ್ಲಿನ ಸರ್ವಶ್ರೇಷ್ಠ ರಾಜ್ಯ, ಕೇಂದ್ರಾಡಳಿತ ಪ್ರದೇಶ, ಜಿಲ್ಲೆಗಳಲ್ಲಿ ತಮ್ಮ ತಮ್ಮ ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಲ್ಲಿ ದಿವ್ಯಾಂಗಜನರ ಹಕ್ಕುಗಳ ಅಧಿನಿಯಮವನ್ನು ಸ್ಥಾಪಿಸಿ ಸೇವೆ ಸಲ್ಲಿಸುತ್ತಿರುವ ಸರ್ವಶ್ರೇಷ್ಠ ರಾಜ್ಯ, ಕೇಂದ್ರಾಡಳಿತ ಪ್ರದೇಶದ ರಾಜ್ಯ ದಿವ್ಯಾಂಗ ಜನರ ಆಯುಕ್ತರುಗಳಿಗೆ ಪುನರ್ವಸತಿ ಸೇವೆಗಳಿಗಾಗಿ ಕಾರ್ಯೋನ್ಮುಖ ಸಿದ್ದತೆಗಳನ್ನು ಮಾಡಿಕೊಂಡಿರುವ ಸರ್ವಶ್ರೇಷ್ಠ ಸಂಸ್ಥೆಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿ ಕಾರಿಗಳು ತಿಳಿಸಿದ್ದಾರೆ.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> — ಡಿ..ವಿ.ಜಿ.

**ಮೈಕ್ರೋ ನ್ಯೂಸ್**

## ತೋಟಗಾರಿಕಾ ಇಲಾಖೆ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ತೋಟಗಾರಿಕೆ ಇಲಾಖೆಯಿಂದ 2024–25ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳಡಿ ಸೌಲಭ್ಯ ಪಡೆಯಲು ಫಲಾನುಭವಿಗಳಿಗಾಗಿ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

**ಯೋಜನೆಗಳು:** ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ, ರಾಷ್ಟ್ರೀಯ ತೋಟಗಾರಿಕೆ ಮಿಷನ್, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ, ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ, ಕೃಷಿ ಯಾಂತ್ರೀಕರಣ (ಎಸ್‌ಎಂಎಎಮ್), ಮಧುವನ ಹಾಗೂ ಜೇನು ಸಾಕಾಣಿಕೆ ಅಭಿವೃದ್ಧಿ ಯೋಜನೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳಡಿ ರೈತರಿಗೆ ಸಹಾಯಧನ ಸೌಲಭ್ಯಗಳಿರುತ್ತವೆ.

ಆಸಕ್ತ ರೈತರು ಈ ಯೋಜನೆಗಳಡಿ ಸಹಾಯಧನ, ಸೌಲಭ್ಯ, ಸದುಪಯೋಗ ಪಡೆದುಕೊಳ್ಳಲು ಆಯಾ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಪಂಚಾಯತ್‌ನ ತೋಟಗಾರಿಕೆ ಉಪನಿರ್ದೇಶಕರು ತಿಳಿಸಿದ್ದಾರೆ.

## ಫಲಿತಾಂಶ ಸುಧಾರಣೆ ಹಿನ್ನೆಲೆ

ಮೊಲದ ಪುಟದಿಂದ

ವಿದ್ಯಾರ್ಥಿಗಳೊಂದಿಗೆ ಸಂವಾಧ ವೇಳೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ವಿದ್ಯಾರ್ಥಿಗಳ ಸಮಸ್ಯೆಗಳನ್ನು ಒಂದೊಂದಾಗಿ ಆಲಿಸಿ, ಮಕ್ಕಳ ಪ್ರಶ್ನೆಗಳನ್ನು ಕೇಳಿದ್ದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಬಳಿಕ ಮತನಾಡಿ, ಜಿಲ್ಲೆಯ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶವು ಕಡೆಮೆಯಾಗಿರುವುದಕ್ಕೆ ಬೇರೆ ಬೇರೆ ಕಾರಣಗಳಿವೆ. ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸಬೇಕು. ಫಲಿತಾಂಶ ಸುಧಾರಣೆ ನಿಟ್ಟಿನಲ್ಲಿ ಅಧಿಕಾರಿಗಳು ಮತ್ತು ಶಿಕ್ಷಕರನ್ನೊಳಗೊಂಡು ತಂಡಗಳನ್ನು ರಚಿಸಿ ಚಿಂತನ ಮಂಥನ ನಡೆಸುವುದು, ಇನ್ನೂ ಬೇರೆ ಬೇರೆ ರೀತಿಯ ಕಾರ್ಯಕ್ರಮಗಳನ್ನು ರೂಪಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಉಪನಿರ್ದೇಶಕರಾದ ಶ್ರೀಶೈಲ್ ಬಿರಾದಾರ ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ಟೂಶನ್ ಕ್ಲಾಸ್‌ಗಳನ್ನು ನಡೆಸುವುದು, ಪ್ರಶ್ನೋತ್ತರ ಪುಸ್ತಕಗಳ ವಿತರಣೆಗೆ ವ್ಯವಸ್ಥೆ ಸೇರಿದಂತೆ ಬೇರೆ ಬೇರೆ ರೀತಿಯ ವಿನೂತನ ಕಾರ್ಯಕ್ರಮಗಳನ್ನು ರೂಪಿಸಿ ಜಾರಿ ಮಾಡಲಾಗುವುದು ಎಂದು ತಿಳಿಸಿದರು.

ವಿವಿಧ ಶಾಲೆಯ ಶಿಕ್ಷಕರು ಮಾತನಾಡಿ, ಪ್ರತಿವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದ್ದು, ಇದರಿಂದ ಶಿಕ್ಷಕರ ಮತ್ತು ಕೊಠಡಿಗಳ ಕೊರತೆ ಉಂಟಾಗುತ್ತಿದೆ. ಇದರಿಂದಲೂ ಫಲಿತಾಂಶ ಹಿನ್ನಡೆಯಾಗುತ್ತಿದೆ ಎಂದು ತಿಳಿಸಿದರು.

ಪತ್ರಕರ್ತರೊಂದಿಗೆ ಸಂವಾದ : ಮಕ್ಕಳೊಂದಿಗೆ ಸಂವಾದ ನಡೆಸುವ ಸಂದರ್ಭದಲ್ಲಿ ಫಲಿತಾಂಶ ಹಿನ್ನೆಡೆಗೆ ಕಾರಣ ಏನು ಎಂಬುದರ ಬಗ್ಗೆ ಪತ್ರಕರ್ತರೊಂದಿಗೆ ಸಹ ಕಾರ್ಯದರ್ಶಿಗಳು ಸಂವಾದ ನಡೆಸಿದರು.

**ವಿದ್ಯಾರ್ಥಿಗಳೊಂದಿಗೆ ಊಟ ಸವಿದರು:** ಕಾರ್ಯ ಕ್ರಮ ಮುಕ್ತಾಯದ ನಂತರ ಕಾರ್ಯದರ್ಶಿಗಳು ವಿದ್ಯಾರ್ಥಿಗಳೊಂದಿಗೆ ತೆರಳಿ ಮಕ್ಕಳೊಂದಿಗೆ ಊಟ ಮಾಡಿದರು.

ಸಂವಿಧಾನ ಪುಸ್ತಕ ವಿತರಣೆ: ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ವಿದ್ಯಾರ್ಥಿಗಳಿಗೆ ಜಿಲ್ಲಾ ಪಂಚಾಯತ್ ವತಿಯಿಂದ ಸಂವಿಧಾನ ಪುಸ್ತಕ ಮತ್ತು ಶಾಲಾ ಶಿಕ್ಷಣ ಇಲಾಖೆಯಿಂದ ಇತರ ಪುಸ್ತಕಗಳನ್ನು ವಿತರಿಸಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಲಾಯಿತು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
Follow for vijayanagara dist. updates

# ಸಸಿ ನೆಡುವ ರೂಢಿ ಬೆಳೆಸಿಕೊಳ್ಳಿ

### ಗ್ಲೋಬಲ್ ಎನ್ವಿರಾನ್ಮೆಂಟ್ ಅಂಡ್ ಮೈನಿಂಗ್ ಸರ್ವೀಸಸ್ ಸಂಸ್ಥೆ ಮುಖ್ಯಸ್ಥೆ ಎಸ್.ಮಂಜುಳಾ ಹೇಳಿಕೆ





ಹೊಸಪೇಟೆ ನ್ಯಾಷನಲ್ ಹೈಸ್ಕೂಲ್ ಮತ್ತು ಎಲ್‌ಎಫ್‌ಎಸ್ ಪ್ರೌಢಶಾಲಾ ಆವರಣದಲ್ಲಿ ಮಹಾಗನಿ, ಬೇವು, ಹೊಂಗೆ, ಹುಣಿಸೆ, ಬಸವನಪಾದ, ಸ್ಪತೋಪೀಡಿಯಾ ಸಸಿಗಳನ್ನು ನೆಟ್ಟು ನೀರೆರೆದರು.

**ಹಂಪಿ ಟೈಮ್ಸ್ ಹೊಸಪೇಟೆ**

ಹವಮಾನ ವೈಪರೀತ್ಯ ತಡೆಯಲು ಮುಂಗಾರಿನ ಈ ಸಮಯದಲ್ಲಿ ಪ್ರತಿಯೊಬ್ಬರೂ ಸಸಿಗಳನ್ನು ನೆಟ್ಟು ಬೆಳೆಸಿದರೆ ಭವಿಷ್ಯದಲ್ಲಿ ತಾಪಮಾನ ತಡೆಯುವುದರ ಜೊತೆಗೆ ಸಕಾಲಕ್ಕೆ ಮಳೆಯನ್ನು ನಿರೀಕ್ಷಿಸಬಹುದಾಗಿದೆ ಎಂದು ಗ್ಲೋಬಲ್ ಎನ್ವಿರಾನ್‌ಮೆಂಟ್ ಅಂಡ್ ಮೈನಿಂಗ್ ಸರ್ವೀಸಸ್ ಸಂಸ್ಥೆಯ ಮುಖ್ಯಸ್ಥರಾದ ಎಸ್.ಮಂಜುಳಾ ಹೇಳಿದರು.

ನಗರದ ಗ್ಲೋಬಲ್ ಎನ್ವಿರಾನ್‌ಮೆಂಟ್ ಅಂಡ್ ಮೈನಿಂಗ್ ಸರ್ವೀಸಸ್‌ವತಿಯಿಂದ ನಗರದ ಎಲ್‌ಎಫ್‌ಎಸ್ ಪ್ರೌಢಶಾಲೆ ಮತ್ತು ನ್ಯಾಷನಲ್ ಹೈಸ್ಕೂಲ್ ಆವರಣದಲ್ಲಿ ಶನಿವಾರ ವಿವಿಧ ಜಾತಿಯ ಸಸಿಗಳನ್ನು ನೆಟ್ಟು ಮಾತನಾಡಿದರು. ಕಳೆದ ಬಾರಿ ಬೇಸಿಗೆಯಲ್ಲಿ ಬಿಸಿಲಿನ ತಾಪಮಾನಕ್ಕೆ ತತ್ತರಿಸಿದ ಅನುಭವ ಪ್ರತಿಯೊಬ್ಬರಿಗಿದೆ. ಬೇಸಿಗೆ ಕಾಲದಲ್ಲಿ ಗಿಡನೆಡಬೇಕು ಎಂದುಕೊಂಡವರೆಲ್ಲರೂ ಈ ಮಳೆಗಾಲದಲ್ಲಿ ಮರೆಯದೆ ಸಿಸಿ ನೆಡಬೇಕು. ಪ್ರತಿಯೊಂದು ಸಸಿಯನ್ನು ಸಂರಕ್ಷಿಸಿ ಬೆಳೆಸಿದಾಗ ಮಾತ್ರ ಉತ್ತಮ ಗಾಳಿ, ಉತ್ತಮ ಆರೋಗ್ಯ ನಮ್ಮದಾಗಿಸಿಕೊಳ್ಳಲು ಸಾಧ್ಯ. ಇಲ್ಲವಾದರೆ ಕಲುಷಿತ ಗಾಳಿಯಿಂದ ಅನಾರೋಗ್ಯಕ್ಕೆ ತುತ್ತಾಗುವ ಸಾಧ್ಯತೆಗಳು ಹೆಚ್ಚಾಗುತ್ತವೆ. ಪ್ರತಿ ಮಕ್ಕಳು ತಮ್ಮ ಹುಟ್ಟು ಹಬ್ಬದಂದು ತಮ್ಮ ಪೋಷಕರೊಂದಿಗೆ ಸಸಿ ನೆಡುವ ರೂಢಿಯನ್ನು ಬೆಳೆಸಿಕೊಳ್ಳಬೇಕು ಎಂದರು. ಸಂಸ್ಥೆಯ ಮುಖ್ಯಸ್ಥರಾದ ಅಪೂರ್ವ ಧನಂಜಯ ಗುಲ್ಲಾನೆ, ನ್ಯಾಷನಲ್ ಪ್ರೌಢಶಾಲೆಯ ಮುಖ್ಯಗುರುಗಳಾದ ವಿಮಲಾ ಮತ್ತು ಪ್ರಾಥಮಿಕ ಶಾಲೆಯ ಮುಖ್ಯಗುರು ಶಾರದದೇವಿ, ಎಲ್ ಎಫ್‌ಎಸ್ ಶಾಲೆಯ ಮುಖ್ಯಗುರುಗಳಾದ ಸಿಸ್ಟರ್ ರಜಿನಾ ಮತ್ತು ಸಿಸ್ಟರ್ ಮಾರಿಯಾ, ಸಂಸ್ಥೆಯ ಸಿಬ್ಬಂದಿಗಳಾದ ಮುಬೀನ್ ಖಾನ್, ರಾಮಕೃಷ್ಣ ರೆಡ್ಡಿ, ದೇವರಮನೆ ಹುಲಿಗೆಮ್ಮ, ಸಂಸ್ಕೃತಿ, ಬಿ. ಎಂ.ಪ್ರಿಯಾಂಕ, ಅನುಷಾ, ಬೃಂದಾ, ನಂದಿತಾ ಇತರರು ಹಾಗೂ ಶಾಲಾ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

# ಸರ್ಕಾರಿ ನೌಕರರಿಂದ ಸರ್ಕಾರಕ್ಕೆ ಎಚ್ಚರಿಕೆ ಬೇಡಿಕೆ ಈಡೇರಿಸದಿದ್ರೆ ನೌಕರಿಗೆ ಗೈರು

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವಿಜಯನಗರ ಜಿಲ್ಲಾ ಶಾಖೆವತಿಯಿಂದ ಸರ್ಕಾರಿ ನೌಕರರ 3 ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಒತ್ತಾಯಿಸಿ ಶಾಸಕ ಎಚ್.ಆರ್. ಗವಿಯಪ್ಪ ಮತ್ತು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರಿಗೆ ಮನವಿ ಸಲ್ಲಿಸಲಾಯಿತು.

ಜಿಲ್ಲಾಧ್ಯಕ್ಷ ಜಿ.ಮಲ್ಲಿಕಾರ್ಜುನ ಗೌಡ ಮಾತನಾಡಿ, ಸರ್ಕಾರಿ ನೌಕರರ ನ್ಯಾಯಯುತ ಬೇಡಿಕೆಗಳಾದ, ಸರ್ಕಾರಕ್ಕೆ ಸಲ್ಲಿಕೆಯಾಗಿರುವ 7ನೇ ವೇತನದ ಆಯೋಗ ವರದಿಯನ್ನು ಯಥಾವತ್ತಾಗಿ ಅನುಷ್ಠಾನಗೊಳಿಸಬೇಕು. ನೌಕರರಿಗೆ ಮಾರಕವಾದ ಎನ್.ಪಿ.ಎಸ್. ಯೋಜನೆಯನ್ನು ರದ್ದುಪಡಿಸಿ ಹಳೆ ಪಿಂಚಣಿ ಯೋಜನೆಯನ್ನು ಮರುಸ್ಥಾಪಿಸಬೇಕು. ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಜಾರಿಗೊಳಿಸಬೇಕು. ನೌಕರರ ಬೇಡಿಕೆ ಈಡೇರಿಕೆಗೆ ಸರ್ಕಾರ ವಿಳಂಬ ಮಾಡಿದರೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಕಾರ್ಯಕಾರಣಿ ತೀರ್ಮಾನದಂತೆ ವಿಜಯನಗರ ಜಿಲ್ಲಾ ನೌಕರರು ಅನಿವಾರ್ಯವಾಗಿ ಬೇಡಿಕೆ ಈಡೇರುವವರೆಗೆ ಅನಿರ್ಧಿಷ್ಠಿತ ಅವಧಿಗೆ ತಮ್ಮ ಸರ್ಕಾರಿ ಕರ್ತವ್ಯಕ್ಕೆ ಗೈರಾಗಲಿದ್ದಾರೆ ಎಂದು ಎಚ್ಚರಿಸಿದರು.



ಸಂಘದ ಜಿಲ್ಲಾ ಕಾರ್ಯದರ್ಶಿ ಕಡ್ಲಿ ವೀರಭದ್ರೇಶ, ಜಿಲ್ಲಾ ಗೌರವ ಅಧ್ಯಕ್ಷ ಹೆಚ್.ಜೀವಣ್ಣ, ರಾಜ್ಯ ಪರಿಷತ್ ಸದಸ್ಯ ಎಸ್.ಬಸವರಾಜ್, ಜಿಲ್ಲಾ ಖಜಾಂಚಿ ರಾಘವೇಂದ್ರ ಹೆಗ್ಡಿಯಾಳ್, ಜಿಲ್ಲಾ ಉಪಾಧ್ಯಕ್ಷರಾದ ಪ್ರಶಾಂತ್ ಜೋಷಿ ಇತರರಿದ್ದರು.

# ಜು.15ರಿಂದ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟ

**ಹಂಪಿ ಟೈಮ್ಸ್ ಹೊಸಪೇಟೆ**



ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ವಿಜಯನಗರ ಜಿಲ್ಲಾ ಶಾಖೆ ವತಿಯಿಂದ ವಿಜಯನಗರ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾ ಕೂಟವನ್ನು ಜು.15 ಮತ್ತು ಜು.16 ರಂದು ನಗರದ ಡಾ॥ ಪುನೀತ್ ರಾಜ್‌ಕುಮಾರ್ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಜಿ.ಮಲ್ಲಿಕಾರ್ಜುನಗೌಡ ತಿಳಿಸಿದ್ದಾರೆ.

ಈ ಕ್ರೀಡಾ ಕೂಟದಲ್ಲಿ ಜಿಲ್ಲೆಯ ಹೊಸಪೇಟೆ, ಕೂಡ್ಲಿಗಿ, ಕೊಟ್ಟೂರು, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ ಮತ್ತು ಹಡಗಲಿ ತಾಲೂಕುಗಳಿಂದ ಒಟ್ಟು 600 ಸರ್ಕಾರಿ ನೌಕರರ ಕ್ರೀಡಾ ಪಟುಗಳು ಭಾಗವಹಿಸಲು ನೊಂದಾಯಿಸಿಕೊಂಡಿದ್ದಾರೆ. ಕ್ರೀಡಾ ಕೂಟಕ್ಕೆ ವಿಜಯನಗರ ಕ್ಷೇತ್ರದ ಶಾಸಕ ಎಚ್.ಆರ್.ಗವಿಯಪ್ಪ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಸಿಇಒ ಎನ್.ಎಂ. ಅಲಿ ಅಕ್ರಮ್ ಶಾ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್., ಅಪರ ಜಿಲ್ಲಾಧಿಕಾರಿ ಅನುರಾಧ.ಜಿ., ಸಹಾಯಕ ಆಯುಕ್ತ ಚಿದಾನಂದ ಗುರುಸ್ವಾಮಿ, ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದ್ದಾರೆ.

# ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಕುರುಬ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಲು, ಸಮಾಜ ತೀರ್ಮಾನ ಕೈಗೊಮಡಿದ್ದು, ಅರ್ಹತೆ ಹೊಂದಿದ ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಹೆಸರುಗಳನ್ನು ನೊಂದಾಯಿಸಿಕೊಳ್ಳುವಂತೆ ಕುರುಬ ಸಮಾಜದ ತಾಲೂಕು ಅಧ್ಯಕ್ಷ ಶಿವರಾಜ್ ಕರೆ ನೀಡಿದರು.

ಪಟ್ಟಣದ ಹಳೆ ತಾಲೂಕು ಕಚೇರಿಯ ಹತ್ತಿರದಲ್ಲಿರುವ ಅಹಿಂದ ಕಚೇರಿಯಲ್ಲಿ ಸಮಾಜದ ವತಿಯಿಂದ ಕರೆಯಲಾಗಿದ್ದ ಪತ್ರಿಕಾ ಘೋಷ್ಠಿಯಲ್ಲಿ ಮಾಹಿತಿ ನೀಡಿದರು. 2023–24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.85ರಷ್ಟು ಅಂಕಗಳನ್ನು ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ, ಪಟ್ಟಣದ ಕನ್ನಿಕಾಪರಮೇಶ್ವರಿ ಕಲ್ಯಾಣ ಮಂಟಪದಲ್ಲಿ ಇದೇ.ಜು.21ರ ಭಾನುವಾರ ಪ್ರತಿಭಾ ಪುರಸ್ಕಾರವನ್ನು ಹಮ್ಮಿಕೊಳ್ಳಲಾಗಿದೆ. ಆದ್ದರಿಂದ ಜು.16ರ ಒಳಗೆ ತಮ್ಮ ಹೆಸರುಗಳನ್ನು ಬೈಪಾಸ್ ಸರ್ಕಲ್‌ನ ಎಸ್.ಎಂ.ಎಸ್. ಆಟೋ ಮೊಬೈಲ್ಸ್‌ನಲ್ಲಿ ನೊಂದಾಯಿಸಿಕೊಳ್ಳಿ ಎಂದರು.

ಅಹಿಂದ ಸಂಘಟನೆಯ ಜಿಲ್ಲಾ ಸಂಚಾಲಕ ಬುಡ್ಡಿ ಬಸವರಾಜ ಮಾತನಾಡಿ, ತಾಲೂಕು ಕುರುಬರ ಸಂಘ ಹಾಗೂ ಕನಕ ನೌಕರರ ಸಂಘದ ಸಹಯೋಗದೊಂದಿಗೆ, ಸತತ 7ನೇ ವರ್ಷ ನಡೆಯುತ್ತಿರುವ ಈ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಪಕ್ಷಾತೀತವಾಗಿದೆ. ಸಮುದಾಯದ ಕಾರ್ಯಕ್ರಮಗಳು ಸಮಾಜಕ್ಕೆ ಮಾದರಿಯಾಗಿವೆ, ವಿದ್ಯಾರ್ಥಿಗಳಿಗೂ ಪ್ರೇರಣೆಯಾಗಲಿವೆ. ನಿಮ್ಮ ಮಕ್ಕಳಿಗೆ ಉನ್ನತ ಮಟ್ಟದ ಶಿಕ್ಷಣವನ್ನು ನೀಡಿ ಸಮಾಜ ಮುಖಿಗಳಾಗುವಂತೆ ಮಾಡಿ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಕನಕ ನೌಕರ ಸಂಘದ ಅಧ್ಯಕ್ಷ ಎಂ.ಎಸ್.ಕಲ್ಗುಡಿ, ಕಾರ್ಯದರ್ಶಿ ಬಿ.ಹನುಮಂತ, ಸಂಚಾಲಕ ನಾಗೇಂದ್ರ, ನಿರ್ದೇಶಕರಾದ ಕೊಟ್ರಯ್ಯ ಒಡೆಯರ್, ಬಂಡಾರಿ ಭರಮಪ್ಪ, ರಾಮಣ್ಣ, ಬಸವರಾಜ, ಜಾತಪ್ಪ, ಕುರುಬ ಸಮಜದ ಹಿರಿಯ ಮುಖಂಡರಾದ ಬಣಕಾರ ಗೋಣೆಪ್ಪ, ನೇತ್ರಾನಂದಪ್ಪ, ನೀಲಪ್ಪ, ಮಾಲವಿ ನಾಗಪ್ಪ, ಹುಡೇದ್ ಹುಲುಗಪ್ಪ, ಎಚ್.ಕೆ.ರಾಮು, ನಿಂಗರಾಜ್, ಶಿವರಾಮಪ್ಪ, ಕೆ.ವೆಂಕಟೇಶ್, ಪ್ರಕಾಶಪ್ಪ, ಪರಶುರಾಮಪ್ಪ ಮತ್ತಿತರರು ಇದ್ದರು.

# ಎಂ.ಕಾಂ. ಮತ್ತು ಬಿ.ಕಾಂ ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ: ಅತ್ಯಂತ ಉಪಯುಕ್ತ




**ಹಂಪಿ ಟೈಮ್ಸ್ ಕೊಟ್ಟೂರು**

ವಿಶ್ವವಿದ್ಯಾಲಯದ ಆದೇಶದ ಅನ್ವಯ ಎಂ.ಕಾಂ. ಮತ್ತು ಬಿ.ಕಾಂ ವಿದ್ಯಾರ್ಥಿಗಳಿಗೆ ಸಂಶೋಧನ ವಿಧಾನವನ್ನು ಪಠ್ಯಕ್ರಮದಲ್ಲಿ ಅಳವಡಿಸಿರುವುದು ಉನ್ನತ ವ್ಯಾಸಂಗಕ್ಕೆ ಅತ್ಯಂತ ಉಪಯುಕ್ತವಾಗಿದೆ ಎಂದು ಮಹಾವಿದ್ಯಾಲಯದ ಪ್ರಾಂಶುಪಾಲರು ಡಾ. ಎಂ. ರವಿಕುಮಾರ್ ಹೇಳಿದರು.

ಇಲ್ಲಿನ ಕೊಟ್ಟೂರೇಶ್ವರ ಮಹಾವಿದ್ಯಾಲಯದಲ್ಲಿ ಸ್ನಾತಕೋತ್ತರ ವಾಣಿಜ್ಯ ವಿಭಾಗದಿಂದ ಆಯೋಜಿಸಿದ ಒಂದು ದಿನದ ಸಂಶೋಧನಾ ವಿಧಾನ ಕಾರ್ಯಗಾರದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಎಂ.ಕಾಂ ಮತ್ತು ಬಿ.ಕಾಂ ವಿದ್ಯಾರ್ಥಿಗಳಿಗೆ ಎಂ.ಫಿಲ್, ಪಿ. ಹೆಚ್ ಡಿ ಉನ್ನತ ವ್ಯಾಸಂಗ ಮಾಡಲು ಹಾಗೂ ಸಂಶೋಧನಾ ವಿಧಾನದಲ್ಲಿ ಪ್ರಾಥಮಿಕ ದತ್ತಾಂಶಗಳ ಸಂಗ್ರಹಣೆ, ಉಲ್ಲೇಖ ಹಾಗೂ ವಿವಿಧ ಕಂಪನಿ, ಸಂಘ–ಸಂಸ್ಥೆಗಳಲ್ಲಿ ಮಾಹಿತಿ ಕ್ರೂಢೀಕರಿಸಲು ತುಂಬಾ ಉಪಯುಕ್ತವಾಗಿದೆ ಎಂದರು.

ಇದರಲ್ಲಿ ಆಸಕ್ತಿ , ಮತ್ತು ಶ್ರಮ ಅಳವಡಿಸಿ ಕೊಂಡ ವಿದ್ಯಾರ್ಥಿಗಳು, ಸಂಶೋಧನೆಯಲ್ಲಿ ಯಶಸ್ಸನ್ನು ಸಾಧಿಸಿ ಉತ್ತಮ ವಿಜ್ಞಾನಿಯಾಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳು ಡಾ. ಮುಬಾರಕ್ ಸಹಾಯಕ ಪ್ರಾಧ್ಯಾಪಕರು , ಪಿ.ಜಿ ಸೆಂಟರ್ ನಂದಿಹಳ್ಳಿ ಇವರು ವಿದ್ಯಾರ್ಥಿಗಳಿಗೆ ಸಂಶೋಧನಾ ವಿಧಾನಗಳ ಬಗ್ಗೆ ಸ್ವ ವಿವರವಾಗಿ ತಿಳಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಪ್ರಶಾಂತ್ ಕುಮಾರ್ ಎಂ.ಹೆಚ್, ನ್ಯಾಕ್ ಕೋ ಆರ್ಡಿನೇಟರ್ ಡಾ. ಪೃಥ್ವಿರಾಜ್, ಡಿ. ರವೀಂದ್ರ ಗೌಡ, ಸಿ.ಬಸವರಾಜ್, ವಸಂತ್ ಕುಮಾರ್ ಲೆಕ್ಕಪರಿಶೋಧಕರು, ದೈಹಿಕ ನಿರ್ದೇಶಕರಾದ ಡಾ. ಶಿವಕುಮಾರ್, ಬಸವರಾಜ್ ಬಣಕಾರ್ ಉಪಸ್ಥಿತರಿದ್ದರು.

ಕಾರ್ಯಗಾರವನ್ನು ಸ್ನಾತಕೋತರ ವಿಭಾಗದ ಮುಖ್ಯಸ್ಥರಾದ ಪಿ. ಗುರುಲಿಂಗನಗೌಡ ಇವರ ನೇತೃತ್ವದಲ್ಲಿ ವಿಭಾಗದ ಉಪನ್ಯಾಸಕರುಗಳಾದ ಸುರೇಶ್ , ಶ್ರೀನಿವಾಸ್, ಶರಣೇಶ್ , ಶ್ರೀಮತಿ ರಹಿಮ್ ಬಿ, ಸತ್ಯಣ್ಣ, ಕುಮಾರಿ ಭವಾನಿ ಮತ್ತು ಚೈತ್ರ ಇವರುಗಳು ಕಾರ್ಯಗಾರವನ್ನು ತುಂಬಾ ಅಚ್ಚುಕಟ್ಟಾಗಿ ಆಯೋಜಿಸಿದ್ದರು.

ವಿದ್ಯಾರ್ಥಿನಿಯಾದ ಕಾವೇರಿ ಮತ್ತು ಅಮೃತ ನಿರೂಪಿಸಿದರು, ವಿಭಾಗದ ಮುಖ್ಯಸ್ಥರು ಪ್ರಾಸ್ತಾವಿಕ ನುಡಿದರು, ವಂದನಾರ್ಪಣೆಯನ್ನು ವಿದ್ಯಾರ್ಥಿನಿ ಅಮೂಲ್ಯ ನೆರವೇರಿಸಿದರು.

# ಕುರಿಗಾಹಿ ಯೋಜನೆ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2024–25 ನೇ ಸಾಲಿನ ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಲ್ಲಿ ನೋಂದಣಿಯಾಗಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳ ಸದಸ್ಯರಾಗಿರುವವರಿಗೆ ನಿಗದಿಯಾದ 175 ಗುರಿಗಳಲ್ಲಿ ಪರಿಶಿಷ್ಠ ಜಾತಿ 30, ಪರಿಶಿಷ್ಠ ಪಂಗಡ 12, ಅಲ್ಪಸಂಖ್ಯಾತ 26, ವಿಕಲಚೇತನರಿಗೆ 5 ಹಾಗೂ ಸಾಮಾನ್ಯ ವರ್ಗದ 102 ಫಲಾನುಭವಿಗಳ ಆಯ್ಕೆಗೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತಿ ಹೊಂದಿದ ಫಲಾನುಭವಿಗಳು ನಿಗದಿತ ಅರ್ಜಿ ನಮೂನೆಯನ್ನು ಹೊಸಪೇಟೆಯ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಹತ್ತಿರದ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದಿಂದ ಪಡೆದು ಅಗತ್ಯ ದಾಖಲೆಗಳೊಂದಿಗೆ ಮಾಡಿ ಸಂಬಂಧಿಸಿದ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಿಗೆ ನೀಡಬೇಕು. ಸಂಘಗಳು ತಮಗೆ ನಿಗದಿಪಡಿದ ಗುರಿಗಳಂತೆ ಕಚೇರಿಗೆ ಜುಲೈ 20 ರೊಳಗಾಗಿ ಸಲ್ಲಿಸಬೇಕು. ಎಂದು ಕರ್ನಾಟಕ ಕುರಿ ಉಣ್ಣೆ ಅಭಿವೃದ್ಧಿ ನಿಗಮ ನಿರ್ದೇಶಕರು ತಿಳಿಸಿದ್ದಾರೆ.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA